18. Miserable failure of the Government in checking the mosquito nuisance in Bangalore City

19 Failure of the Government in preventing large-scale theft and other criminal acts by unsocial elements.

20. Failure of the Government in bringing down the cost of chemical manure by increasing the production of artificial manure.

21. Failure of the Government in cancelling the levy of Rs. 10 levied for all-electric-homes.

22. Failure of the Government in supplying the required quantity of essential drugs and allowing spurious drugs and medicines being sold in the Bazaars.

23. Failure of the Government in developing of the Karwar Port which will be a natural harbour when developed.

24. Failure of the Government in discontinuing the harmful lottery system, horse race, and the night clubs which are run on large scale.

25. Failure of the Government in taking action against several courts where undue delay is caused in taking decisions.

26. Failure of the Government in bringing down the cost of food stuffs which is essential to improve the living conditions of the house holders, if need be by giving substantial subsidy to the growers.

27. Failure of the Government in not allowing maladministration, misappropriation and misuse of power in many Co-operative Societies.

28. Failure of the Government in not allowing largescale increase of transport cost which has a direct bearing on the cost of production and distribution.

29. Failure of the Government in giving a clean and efficient administration.

30. Failure of the Government in the working of the Fourth Five Year Plan properly and profitably to the best advantage of the State.

31. Failure of the Government in completing the several River Projects in time."

The amendment was negatived

MR. DEPUTY SPEAKER.—I will now put the motion to vote of the House. The question is:

"That we the Members of the Karnataka Legislative Assembly assembled in this Session, beg leave to thank the Governor for the Address delivered to the Members of the Legislature on the 10th February, 1975."

The motion was adopted

Karnataka Civil Services (Revision of pay of Certain Categories of Posts) Bill, 1975

Motion to Consideration

Mr. DEPUTY SPEAKER.—Next, the Hon. Minister for Finance to move the Bill.

Sri M. Y. GHORPADE (Minister for Finance and Housing) : I beg to move :

> "That the Karnataka Civil Services (Revision of pay of certain categories of Posts) Bill, 1975 be taken into consideration."

Mr. DEPUTY SPEAKER.—Motion moved :

> "That the Karnataka Civil Services (Revision of pay of certain categories of Posts) Bill, 1975 be taken into consideration."

† ಶ್ರೀ ಎಂ.ವೈ. ಘೋರ್ಪಡೆ.—ಸ್ವಾಮಿ, ಈ ಬಿಲ್ಲಿನಲ್ಲಿ ರತಕ್ಕ ಕೆಲವು ಅಂಶಗಳನ್ನು ನಾನು ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಇದು ಒಂದು ಗವರ್ನ್‌ಮೆಂಟ್ ಆರ್ಡರನಲ್ಲಿ ಇರತಕ್ಕ ತಪ್ಪನ್ನು ತಿದ್ದುವ ಉದ್ದೇಶದಿಂದ ತಂದಿರತಕ್ಕ ಬಿಲ್ಲು. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲೂ ಯಾವಾಗಲೂ ನಾನ್ ಡಿಪ್ಲೋಮಾ ಮತ್ತು ಡಿಪ್ಲೊಮಾ ಹೋಲ್ಡರ್ಸ್‌ಗೆ ಸಂಬಳ ವ್ಯತ್ಯಾಸ ಇದೆ. ಆದರೆ 1970ರಲ್ಲಿ ಕರ್ನಾಟಕ ಸಿವಿಲ್ ಸರ್ವೀಸ್ ರಿವೈಸ್ಡ್ ಪೇ ಸ್ಕೇಲ್ಸ್ ಮಾಡಿದಾಗ ಈ ಸಂಬಂಳದಲ್ಲಿರತಕ್ಕ ವ್ಯತ್ಯಾಸವನ್ನು ಅವರು ಸ್ಪಷ್ಟಪಡಿಸುವುದಿಲ್ಲ. ಅದು ಒಂದು ತಪ್ಪು ಮಾಡಿದರು. ಕಾಮನ್ ಪೇ ಸ್ಕೇಲ್ ಎಂದು ಬರೆಯುವಾಗ ಒಂದೇ ಕಡೆ ಬರೆದರು, ಡಿಪ್ಲೊಮೊ ಹೋಲ್ಡರ್ಸ್, ನಾನ್ ಡಿಪ್ಲೊಮೊ ಹೋಲ್ಡರ್ಸ್‌ಗೆ ಇರುವ ವ್ಯತ್ಯಾಸ ಏನು ಇದೆ ಅದನ್ನು ಬಹಳ ಸ್ಪಷ್ಟವಾಗಿ ರೂಲ್ಸ್‌ನಲ್ಲಿ ತೋರಿಸಿರಲಿಲ್ಲ. 1970ರ ಮುಂಚೆ ವ್ಯತ್ಯಾಸ ಇತ್ತು. ಈ ವ್ಯತ್ಯಾಸ ತೆಗೆಯಬೇಕೆಂಬ ಉದ್ದೇಶ ಸರ್ಕಾರಕ್ಕೆ ಇರಲಿಲ್ಲ. ರಿವೈಸ್ಡ್ ರೂಲ್ಸ್ 1970ರಲ್ಲಿ ಮಾಡಿದಾಗ ಒಂದು ತಪ್ಪು ಮಾಡಿಬಿಟ್ಟರು ಆ ವ್ಯತ್ಯಾಸ ತೋರಿಸಿರಲಿಲ್ಲ. ಇದ ಇನ್‌ಟೆನ್‌ಷನಲ ಮಾಡಿದ್ದಲ್ಲ. ಇದರ ಪರಿಣಾಮವಾಗಿ ನಾನ್ ಡಿಪ್ಲೊಮೊ ಹೋಲ್ಡರ್ಸ್, ಡಿಪ್ಲೊಮಾ ಹೋಲ್ಡರ್ಸ್ ಸಂಬಳ ಕ್ಲೈಮ್ ಮಾಡುವುದಕ್ಕೆ ಅವಕಾಶ ಸಿಕ್ಕಿತು. ಇದನ್ನು ಉಪಯೋಗಿಸಿಕೊಂಡು ಒಬ್ಬರು ಕೋರ್ಟಿಗೆ ಹೋಗಿ, ನನಗೆ ಡಿಪ್ಲೊಮೊ ಹೋಲ್ಡರ್ಸ್ ಸ್ಕೇಲ್ ಬರಬೇಕು ಎಂದು ಕೋರ್ಟಿನಿಂದ ಒಂದು ಆರ್ಡರ್ ತಂದರು. ತಂದನಂತರ ಗವರ್ನ್‌ಮೆಂಟ್ ಆರ್ಡರ್ ತಿದ್ದುವ ದೃಷ್ಟಿಯಿಂದ 9-7-1971 ರಲ್ಲಿ ಸರ್ಕಾರದವರು ಒಂದು ಅಜ್ಞೆ ಹೊರಡಿಸಿದರು. ಕೋರ್ಟಿನಲ್ಲಿ ಏನು ಆಯಿತು? ಈ ರೀತಿ ಮಾಡಲಿಕ್ಕೆ ಬರುವುದಿಲ್ಲ, ಆರ್ಟಿಕಲ್ 309ರ ಪ್ರಕಾರ, ಗವರ್ನರ್ ಆದೇಶದ ಪ್ರಕಾರ ಮಾಡಿರತಕ್ಕ ರೂಲ್ಸ್‌ನ್ನು ಬೇರೆ ಗವರ್ನ್‌ಮೆಂಟ್ ಆರ್ಡರ್ ಮಾಡಿ ತಿದ್ದುಪಡಿ ಮಾಡಲಿಕ್ಕೆ ಅವಕಾಶ ಇಲ್ಲ ಎಂದು ಹೇಳಿದರು. ಆದನ್ನು ಸರಿಪಡಿಸಬೇಕಾದರೆ ಕಾನೂನು ಪ್ರಕಾರ ಲೆಜಿಸ್ಲೇಚರ್ ಮುಂದ ಬಂದು ಕಾನೂನು ಮೂಲಕ ಸರಿಪಡಿಸಬೇಕಾಗಿದೆ. 1970ರಲ್ಲಿ ಮಾಡಿರತಕ್ಕ ಕರ್ನಾಟಕ ಸಿವಿಲ್ ಸರ್ವೀಸ್ ರಿವೈಸ್ಡ್ ಪೇ ಸ್ಕೇಲ್ ಏನಾಯಿತು, ಅದರಲ್ಲಿ ಅನ್‌ಇನ್‌ಟೆನ್‌ಷನಲ ಆಗಿರತಕ್ಕ ತಪ್ಪನ್ನು ಬೇರೆ ರೀತಿ ತಿದ್ದುವುದಕ್ಕೆ ಆಗುವುದಿಲ್ಲ ಎಂದು ಲಾ ಡಿಪಾರ್ಟ್‌ಮೆಂಟ್ ಒಪಿನಿಯನ್ ಇರುವುದರಿಂದ ಮತ್ತು ಒಬ್ಬರು ಕೋರ್ಟಿಗೆ ಹೋಗಿ ಕೋರ್ಟಿನಲ್ಲಿ ತೀರ್ಮಾನವಾದ ಪ್ರಕಾರ ರಿವೈಸ್ಡ್ ಪೇ ಸ್ಕೇಲ್ಸ್ ಪ್ರಕಾರ ಯಾವ ಸ್ಕೇಲ್ಸ್ ಕೊಟ್ಟಿದ್ದಾರೆ ಆ ಸ್ಕೇಲ್ಸ್ ಕೊಡದಿದ್ದರೆ ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತದೆ ಎಂದು ಹೇಳಿದ್ದರಿಂದ ಅದನ್ನು ತಿದ್ದುಪಡಿ ಮಾಡಲಿಕ್ಕೆ ನಾವು ಆರ್ಡಿನೆನ್ಸ್ ಮಾಡಿದೆವು. ಅದನ್ನು ಈಗ ಈ ಸಭೆಯ ಮುಂದೆ ತರಬೇಕಾಯಿತು. ಇದರಲ್ಲಿ ಅಂತಹ ಒಂದು ದೊಡ್ಡ ಅಂಶ ಏನೂ ಅಡಕವಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಕೋರ್ಟಿನಲ್ಲಿ ಯಾವಾಗ ತೀರ್ಮಾನವಾಯಿತು ?

Sri M. Y. GHORPADE.—It was sometime in 1973. The order said that the Government order cannot modify the rules as promulgated under article 309.

ಶ್ರೀ ಕಾಗೋಡು ತಿಮ್ಮಪ್ಪ.—ಎರಡು ವರ್ಷ ಏನು ಮಾಡಿದಿರಿ ?

ಶ್ರೀ ಎಂ. ವೈ. ಘೋರ್ಪಡೆ.—1973ಕ್ಕೆ ತೀರ್ಮಾನ ಆಯಿತು. ಕೋರ್ಟಿನಲ್ಲಿ ತೀರ್ಮಾನ ಆದಮೇಲೆ we had to give effect to it. The point is the Court passed an order and then the person said if you don't implement it it will become contempt of court. In 1970 this Karnataka Civil Service (Revision of Pay of certain categories of Posts) were introduced where out of oversight, the distinction between the pay scales of diploma holders and non-diploma holders, was not clearly mentioned. There was no intention on the part of the Government to abolish the distinction between diploma and non-diploma holders Supposing we now do not amend it in this manner, several non-diploma holder; can claim the same benefit of the mistake. It is a over-sight. Therefore the Government passed another order trying to amend. it But the High Court said that the rules under Article 309 cannot be amended in that manner. Now, after the High Court has given this decision. *i.e.*, he should be given the diploma holder's scale, even if we tried to amend the rules under Article 309 after securing the overnor's permission, the opinion of the Legal Department is not to over-ride the decision of the High Court. Therefore, the only way to correct the position was to bring an Ordinance because the Assembly was not in Session, and then regularise it,

The date of the Court order is 13-12-1973, and the date of the Ordinance is 11-12 1974. In between, the Legal department was examining in what manner to get over the difficulty. One way was to amend the rules. Then, after subsequent examination we found that even that may not be legally sstisfactory since it is a question of changing the effect of a High Court order. Therefore, the safest thing to do is to do it by legislation so that it is beyond doubt.

As pointed out in the beginning, this arises out of a mistake. No doubt one person has gone to the Court. If this is not corrected in this manner, then there will be considerable dislocation and confusion, because large number large number of diploma holders will also be entitled to similar treatment. This is an unusual situation where an inadvertant and uuintentional error of the Government Order has to be corrected only in this manner.

Sri KAGODU THIMMAPPA.—Why you have not immediately reacted to the decision of the High Court and brought the amendment much earlier ?

Sri M.Y. GHORPADE.—When there are 3½ lakh employees, I think much of the time is taken by the service conditions. Sir if you ask my personal opinion, more time is spent in the service matters than what ought to be the position. Therefore certain types of delays take place. All that I would say is, this is a simple delay, the result of which has

not harmed anybody. It is not as though the State Government has been put to loss or the persons concerned inconvenienced. There is no intention of giving higher pay scales to non-diploma holders.

Sri M. S. KRISHNAN —As far as the particular person is concerned, would you not have paid the amount ? I hope you have implemented it.

Sri M.Y. GHORPADE.—I do not know whether the salary actually has been paid. Even if it has not been paid, it has to be paid because the Court order has to be respected. I am informed that unfortnnately even for that man it has not been paid.

Sri KAGODU TAIMMAPPA.—Then, it amounts to contempt of Court !

Sri M. Y. GHORPADE.—We can do it by giving retrospective effect. There is no contempt if it is done in this manner.

Mr. DEPUTY SPEAKER.—Hon. member Sri Bangarappa may initiate the (debate) (discussion).

Sri KAGODU THIMMAPPA.—Sir, I want one clarification from the Hon'ble Minister.

Mr. DEPUTY SPEAKER.—There is no provision to ask for a clarification now.

Sri KAGODU THIMMAPPA.—Certain facts are not made clear. I may be permitted to quote one instance.

Mr. DEPUTY SPEAKER.—My difficulty is, I can give an apportunity to make a speech, but I cannot give the hon. member two opportunities, first for a clarification and than to make a speech. If he want to ask a clarification, I will permit it but he cannot have a subsequent opportunity to speak on the Bill.

Sri KAGODU THIMMAPPA.—Sir, it is my option.

Mr. DEPUTY SPEAKER.—When the Bill is taken up for consideration, he has a right to make a speech only once.

Sri KAGODU THIMMAPPA.—I want to seek a clarification before I participate in this debate.

Mr. DEPUTY SPEAKER.—He can seek e clarification during the course of his speech. The discussion on the Bill has already commenced. The Hon. Minister has offered his remarks. If he wants any clarification, he could have sought it earlier.

Sri KAGODU THIMMAPPA.—Now the Bill has been introduced. If there are any ambiguities, we can seek a clarification before participating in the disoussion.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ ಈ ವಿಷಯದ ಬಗ್ಗೆ ರೂಲ್ಸ್‌ನಲ್ಲಿ ಏನಿದೆಯೋ ಗೊತ್ತಿಲ್ಲ. ನಮ್ಮಲ್ಲಿ ಕೆಲವು ಸಂಪ್ರದಾಯಗಳು ಮೊದಲಿನಿಂದಲೂ ಬೆಳೆದುಕೊಂಡು ಬಂದಿದೆ. ಯಾವುದಾದರೂ ಒಂದು ಬಿಲ್ ಬಂದಾಗ ಯಾವುದಾದರೂ ಸ್ವಲ್ಪ ಸ್ಪಷ್ಟವಾಗಿ ಅರ್ಥವಾಗದಿದ್ದರೆ, ತಿಳುವಳಿಕೆ ಆಗದಿದ್ದರೆ ಅದನ್ನು ಕೇಳಿ ತಿಳಿದು ಕೊಳ್ಳಬೇಕು ಎನ್ನತಕ್ಕಂಥ ಸಂಪ್ರದಾಯ ಬಂದಿದೆ. ಅದನ್ನು

ಅವರು ಕೇಳಿ ತಿಳಿದುಕೊಳ್ಳುತ್ತಾರೆ. ಆ ರೀತಿ ತಿಳಿದುಕೊಳ್ಳುವುದರಿಂದ ಒಂದು ಅನುಕೂಲವಿದೆ, ಅದು ಏನೆಂದರೆ ಮಾನ್ಯ ಸದಸ್ಯರು ಬಿಲ್ಲಿನ ಮೇಲೆ ಭಾಷಣ ಮಾಡುವಾಗ ಅನಾವಶ್ಯಕವಾದಂಥ ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ತಿಳುವಳಿಕೆ ಇದ್ದರೆ ಅಗ ಆರ್ಗ್ಯುಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ, ಸ್ಪಷ್ಟೀಕರಿಸಿದ ಮೇಲೆ ಚರ್ಚೆ ಮಾಡುವಾಗ ಅವರಿಗೆ ಬಹಳ ಉಪಯೋಗವಾಗುತ್ತದೆ. ಆದುದರಿಂದ ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಿ.

MR. DEPUTY SPEAKER.—I do not want to come in their way. Let us adhere to the rules strictly. We must look to the spirit of the rule. If the hon. member tells me that he wants to be the first participant on behalf of the opposition, with great pleasure and goodwill for him I would do so. He could have put as many clarifications at the outset as were necessary. But he wants that he should be given two opportunities which I feel is not possible for me to accede.

Sri KAGODU THIMMAPPA.—Immediately the Bills are introduced we used to seek clarifications before participating in the discussion.

Sri S. BANGARAPPA.—With great respect to the Chair, I suggest the hon. member may kindly be allowed to seek a clarification. That ends the matter. Even after hearing the hon. Finance Minister if he so feels, he can participate in the debate.

Mr. DEPUTY SPEAKER.—When the Hon. Minister has offered his remarks on the Bill, it is for the other members to participate in the discussion. He has a right of reply. Rule 294 (2) is clear on this point viz that no member shall speak more than once on a motion except with the permission of the Speaker. When the rules are there, I am bound by them. Therefore I have been telling him to speak now instead of seeking clarification. If the hon. Minister wants to clarify, he can only do so at the time of his reply to the debate.

Sri KAGODU THIMMAPPA.—What was the pay scale of Diploma Holders and non-diploma holders before 1970 Revission of Scales of Pay ?

Sri M. Y. GHORPADE.—I shall collect that information and tell you during the course of my reply to the debate.

† Sri T. R. SHAMANNA (Fort).—Mr. Deputy Speaker Sir, I oppose the Karnataka Civil Services Revision of Pay of Certain Categories of Posts Bill, 1975 for this reason that it is disgraceful for a Government which has an army of men in the Legal Department to say that this is not the intention or that is not the intention. The administration has to bow its head for the gross ignorance of such important things. As a matter of fact, I can tell you if you go to the High Court, you will find 150 Government employees roaming about in the corridors of the High Court or they will go the lawyer's office and spend their mornings and evenings. Even after 18 year of integration, they are not able to solve the problem of seniority list. One way or the other, the writs are going there and a lot of expenditure incurred on behalf of the Government.

SRI K. PUTTASWAMY.—But unfortunately there are conflicting judgements. What can a poor Government do ?

SRI T. R. SHAMANNA.—In the Bill that has been introduced, it is not palatable to have such excuses like it was never the intention of the Goveonment to give pay to the non-diploma holders holding such posts. When a list is prepared, there should be some distinction between the Cartificate Holder and the diploma holder and also between diploma holders and graduates.

When such clear distinction is made at the time of decision of a particular issue, such matters will not arise, because as a matter of fact there are a number of decisions challenged not in the High Court but a so in the supreme Court, if you are going to change it. The Government is made to spend large sums of money giving one order, and issuing another order changing something. There is no stability and there is no certainty at all. Here the whole object of this Bill is to see that a decision taken by the Government in fixing up the scale and salary of certain grade is to be changed. Then it is stated in the Bill that a common scale for posts of Shop Assistants (Common Facility Centre) with the qualification of Industrial Training Certificate, non-diploma Holders and even Diploma Holders and Textile Graduates was created. They say distinction has not been made between the cadre of Certificate holder and Diploma holder. There is another distinction in respect of Degree holders in respect of Textile Department and the Diploma holders and Graduates in this Industries Department. As far as this is concerned, this is one thing. From the experience gained by the Government since the integration of the State, it is better for them to take a final decision and give a finality relating to the seniority. In every Department the complaint of overlooking the seniority is being heard and the affected candidates are approaching the High Court for redress. In order to avoid the hardship of the employees and in order to save time of the Department and the employees, it is better to prepare a seniority list of all Departments, call for objections from the employees and them finally decide the list. Instead of bringing legislation by priece meal, it is better for the Government to prepare the list as I have suggested, publish it, call for objections and finally decide it. You can avoid litigation and you can save time and botheration. If such things are not done, it is difficult to run the administration. I am not blaming the present Government. This trouble is there ever since the integration of the State. We are having this trouble in one from or the other. Therefore, I object to the method of bringing Bills of this type before the House.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಆಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ಈ ಮಸೂದೆಯನ್ನು ಸದನದ ಒಪ್ಪಿಗೆಗಾಗಿ ಮಂಡಿಸಿದ್ದಾರೆ. ಇದು ಅವರ ಶಾಖೆಗೆ ಸಂಬಂಧಪಟ್ಟಿದ್ದು. ಇದರಲ್ಲಿ ಪ್ರಮುಖವಾಗಿ ಡಿಸ್ಟಿಂಕ್ಷನ್ ಮಾಡಬಾರದು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಡಿಸ್ಟಿಂಕ್ಷನ್ ಮಾಡಬೇಕು, ಯಾವಾಗ ಅಂದರೆ ಡಿಪ್ಲೊಮಾ ಹೋಲ್ಡರ್ಸ್ ಇರುತ್ತಾರೆ. ನಾನ್ ಡಿಪ್ಲೊಮಾಹೊಲ್ಡರ್ಸ್ ಇರುತ್ತಾರೆ, ಆಗ ಅವರವರ ಕ್ವಾಲಿಫಿಕೇಷನ್ ಪ್ರಕಾರವೇ ಪೇಸ್ಕೇಲ್ಸ್

ನಲ್ಲಿ ಡಿಸ್ಟಿಂಕ್ಷನ್ ಇರಬೇಕು. ಮಾನ್ಯ ತಿಮ್ಮಪ್ಪನವರು ಕೇಳಿದ್ದು ಮೊದಲು ಪೇ ಸ್ಕೇಲ್ 450 ರೂಪಾಯಿ ಏನಿತ್ತು ಅದು 175-450. ಇದು ಕಾಮನ್ ಆಗಿ ಮಾಡಿರತಕ್ಕ ಸ್ಕೇಲ್. ಇದರ ಮೇಲೆ ರಿಟ್ ಪಿಟಿಷನ್ ಹಾಕಿದರು. ಅದಕ್ಕಿಂತ ಮೊದಲು ಅಂದರೆ 1970ಕ್ಕೆ ಮೊದಲು ಡಿಪ್ಲೊಮಾ ಹೋಲ್ಡರ್ಸ್‌ಗೆ 150-320, ನಾನ್ ಡಿಪ್ಲೊಮಾ ಹೋಲ್ಡರ್ಸ್‌ಗೆ 100-200 ಇತ್ತು. 1-1-1970 ರಲ್ಲಿ ಡಿಪ್ಲೊಮಾ ಹೋಲ್ಡರ್ಸ್‌ಗೆ 150-450, ನಾನ್ ಡಿಪ್ಲೊಮಾ ಹೋಲ್ಡರ್ಸ್ 120-240 ಇತ್ತು. ಇದನ್ನು ಹೇಗೆ ಮಾಡಿದಿರಿ ? ಇದು ಟೆಕ್ನಿಕಲ್ ವಿಷಯವಾದ್ದರಿಂದ ಹೈಕೋರ್ಟ್‌ನಲ್ಲಿ ತೀರ್ಮಾನ ಕೊಟ್ಟರು. ರೂಲ್ಸ್ ಅಮೆಂಡ್‌ಮೆಂಟ್ ಮಾಡಬೇಕಾದರೂ ಕೂಡ in the name of the Governor, ಎಂದು ಇರುವುದರಿಂದ. It comes in the way. You cannot change the rules by means of notification as upheld by the High Court. ಅಂಕಿಅಂಶಗಳ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಸ್ಟೇಟ್ ಮೆಂಟ್ ಆಫ್ ಅಬ್ಜೆಕ್ಟ್ ಅಂಡ್ ರೀಜನ್ಸ್‌ನಲ್ಲಿ ಸಂಪೂರ್ಣವಾಗಿ ಬರೆಯಬೇಕಾಗಿತ್ತು. ಯಾರು ಯಾರು ಎಷ್ಟೆಷ್ಟು ಆಯಿತು, 1970ಕ್ಕೆ ಮುಂಚೆ ಎಷ್ಟಿತ್ತು, ಅನಂತರ ಎಷ್ಟಾಯಿತು, ಇದರ ಅಂಕಿಅಂಶ ಗೊತ್ತಾದಮೇಲೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಪ್ರಶ್ನೆ ಮಾಡತಕ್ಕ ವಿಷಯ ಇಷ್ಟು. ಬರೀ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಗೆ ಸಂಬಂಧಪಟ್ಟಿರ ತಕ್ಕ ಬಿಲ್ಲನ್ನು ತೆಗೆದುಕೊಂಡು ಬಂದಿದ್ದೀರಿ. ಇದನ್ನು ಮಾಡದೇ ಹೋದರೆ ಬೇರೆ ಇಲಾಖೆಯವರು ಬರುತ್ತಾರೆ. ಅನೇಕ ಇಲಾಖೆಗಳು ಇರುವುದರಿಂದ ಅವರು ಇವತ್ತು ಹೈಕೋರ್ಟ್‌ನಲ್ಲಿ ರಿಟ್ ಹಾಕಿ ಅದು ಜಡ್ಜ್‌ಮೆಂಟ್ ಆದರೆ ಅದಕ್ಕೆ ನಾವು ಅಡಿಷಿಯರ್ ಆಗಬೇಕಾಗುತ್ತದೆ. Not only it affects the Industries and Commerce Department but also it affects so many other Departments of Government. ಅಬ್ಜೆಕ್ಟ್ಸ್ ಅಂಡ್ ರೀಸನ್ಸ್ ನಲ್ಲಿ ಈ ರೀತಿ ಇದೆ. "The intention of Government was to give the scale of pay of Rs. 120-5-150-8 190-10-240 to non-diploma holders only. This way by oversight, not incorporated in the Schedule to the revised pay rules, ತಾವು ಬಿಲ್ಲನ್ನು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕಿಂತ ಮೊದಲು ವ್ಯಾಖ್ಯಾನ ಕೊಡ ಬೇಕಾದರೆ there will be so many matters pending before the Law Department ಒಪ್ಪಿಗೆ ತೆಗೆದುಕೊಳ್ಳಲು ತಡವಾಗುತ್ತದೆ ಎನ್ನುವ ಮಾತನ್ನು ತಿಳಿಸಿ ದಿರಿ. 13-12-1973 ರಂದು ಹೈಕೋರ್ಟ್ ಜಡ್ಜ್‌ಮೆಂಟ್ ಆಗಿದೆ. 11-12-1974ರಲ್ಲಿ ಆರ್ಡಿ ನೆನ್ಸ್ ಕೊಟ್ಟಿದೆ. ಅಂದರೆ ಒಂದು ವರ್ಷವಾಯಿತು. ಜಡ್ಜ್‌ಮೆಂಟ್ ಆಗಿರತಕ್ಕದ್ದು ಸರ್ಕಾರಕ್ಕೆ ಗೊತ್ತಿದ್ದರೂ ಆರ್ಡಿನೆನ್ಸ್ ಹೊರಡಿಸುವುದಕ್ಕೆ ಒಂದು ವರ್ಷ ಏತಕ್ಕೆ ವಿಳಂಬ ಮಾಡಿದಿರಿ ಎಂಬುದು ಪ್ರಮುಖವಾದ ಪ್ರಶ್ನೆ. ಡಿಸ್ಟಿಂಕ್ಷನ್ ಇರಬೇಕೆಂಬುದನ್ನು ಒಪ್ಪಿಕೊಳ್ಳುತ್ತೇನೆ. The purport of the Bill I really welcome. But the way in which this matter has been tackled by the various Departmens tis being questioned by me. I want to know why there is such inordinate delay on the part of the Government to execute the Judgement passed by the High Court. That is the question involved here. ಮಾನ್ಯ ಸದಸ್ಯರು ವಿಪರೀತ ಕೆಲಸ ಇರುವುದಾಗಿ ತಿಳಿಸಿದರು. ವಿಪರೀತ ಕೆಲಸವಿದ್ದರೆ ಅದನ್ನು ನೋಡಿಕೊಳ್ಳುವುದಕ್ಕೆ ಮೂರೂವರೆ ಲಕ್ಷ ಜನರಿದ್ದಾರೆ. ಇವರಿಗೆಲ್ಲಾ ಸಂಬಳ ಕೊಟ್ಟು ಇಟ್ಟಿದ್ದೀರಿ. ಇನ್ನು ಎರಡನೆಯದು ಲಾ ಡಿಪಾರ್ಟ್ ಮೆಂಟ್ ತಮಗೆ ಇದೆ. ಇವತ್ತು ರೂಲ್ಸ್ ಹೊರಡುತ್ತಿರುವುದು ಇನ್ ದಿ ನೇಮ್ ಆಫ್ ದಿ ಗವರ್ನರ್ ಎಂದು. ಹೈಕೋರ್ಟ್ ಜಡ್ಜ್‌ಮೆಂಟ್ ಆದಮೇಲೆ ತಾವು ಬೇರೆ ನೋಟಿಫಿಕೇಷನ್ ಮೂಲಕ ರೂಲ್ಸ್ ಕಳುಹಿಸಿದ್ದೀರಿ. Again there is distinction between the Diploma Holders and Non-Dimploma Holders. ಮಾನ್ಯ ಅಧ್ಯಕ್ಷರೇ ಎರಡು ಮಹಾ ತಪ್ಪುಗಳಿಂದ ಸರ್ಕಾರಿ ಕೆಲಸಗಳು ಹಾಳಾಗುತ್ತಿವೆ, ಮತ್ತು ತಡವಾಗುತ್ತಿವೆ. ಅನ್ ಇನ್‌ಟೆನೆಷನಲ್ಲಿ, ಬೈ ಮಿಸ್ಟೇಕ್, ಬೈ ಓವರ್ ಸೈಟ್"ಈ ಎರಡು ಮೂರು ಪದಗಳು ಸಂಪೂರ್ಣ ವಾಗಿ ಸರ್ಕಾರಿ ಆಡಳಿತ ಯಂತ್ರವನ್ನು ಸ್ಥಗಿತಗೊಳಿಸತಕ್ಕ ಪದಗಳು. ಇಂಥ ಬಿಲ್‌ಗಳನ್ನು ತಂದು ಇವನ್ನು ಮುಚ್ಚಿಹಾಕಿದ್ದಾರೆ. ಇದನ್ನು ನಾನು ಪ್ರಶ್ನೆ ಮಾಡುತ್ತೇನೆ. ತಡವಾಗಿರುವುದ ರಿಂದ ಪರಿಣಾಮ ಏನಾಗಿದೆ ಎಂದರೆ ಈ ಸ್ಕೇಲನ್ನು ಕೊಟ್ಟಿದ್ದಾರೆ ಮತ್ತು ಇದರ ಪ್ರಕಾರ You have paid to non-diploma holder. ಮಾನ್ಯ ಅಧ್ಯಕ್ಷರೆ ನನ್ನ ಸ್ಪಷ್ಟ ಅಭಿಪ್ರಾಯ ಇಲಾಖೆಯವರು ಇಷ್ಟೊಂದು ತಡವಾಗಿ ಹೈಕೋರ್ಟ್ ಜಡ್ಜ್‌ಮೆಂಟನ್ನು ಜಾರಿಮಾಡಿ ತಪ್ಪುಮಾಡಿ ದ್ದಾರೆ. ಮತ್ತು ಈ ಬಿಲ್ಲನ್ನು ತರತಕ್ಕ ಸ್ಥಿತಿಗೆ ಈಗ ನಾವು ಬಂದಿದ್ದೇವೆ. ಆ ರೀತಿ ಆಗಕೂಡದು.

ಮತ್ತೆ ಡಿಪ್ಲೊಮೋ ಮತ್ತು ನಾನ್ ಡಿಪ್ಲೊಮೋಗಳಿಗೆ ಡಿಸ್ಟಿಂಗಸನ್ ಇರಬೇಕು ಎಂಬ ಮುಖ್ಯ ವಿಷಯವನ್ನು ನಾನು ಸ್ವಾಗತ ಮಾಡುತ್ತೇನೆ. ಅದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷರೆ ಈ ಮಸೂದೆಯಲ್ಲಿ ಎರಡು ಮೂರು ಪ್ರಶ್ನೆಗಳು ಬರುತ್ತವೆ. ಎರಡು ಕ್ಯಾಟಗರೀಸ್ ಬೇರೆ ಬೇರೆ ಇರಬಹುದು ಎನ್ನುವುದು ನನ್ನ ಅಭಿಪ್ರಾಯವಲ್ಲ. ಹಿಂದೆ ಇದೇ ರೀತಿ ಡಿಪ್ಲೊಮೋ ಮತ್ತು ನಾನ್ ಡಿಪ್ಲೊಮೋ ಹೋಲ್ಡರ್ಸ್‌ಗೆ ವ್ಯತ್ಯಾಸಗಳು ಇದ್ದುವು ಎಂದು ಏನು ಹೇಳಿದ್ದಾರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಸರ್ಕಾರದ ಅಧಕ್ಷತೆಯ ಬಗ್ಗೆ ಈಗಾಗಲೇ ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆ. ನಾನು ಅದನ್ನು ಮತ್ತೆ ಹೇಳಬೇಕಾಗಿಲ್ಲ. By oversight that was done' ಎಂದು ಹೇಳುತ್ತಾರೆ. ಅದು ನನಗೆ ಅರ್ಥವಾಗುವುದಿಲ್ಲ. ತಮಗೂ ಮತ್ತು ಮಾನ್ಯ ಸಚಿವರಿಗೂ ಗೊತ್ತಿರುವ ಹಾಗೆ ತುಕೋಳ್ ಕಮೀಷನ್ ರಿಪೋರ್ಟ್‌ನಲ್ಲಿಯೂ ಸಹ ಈ ವಿಷಯಗಳು ಪ್ರಸ್ತಾಪವಾಗಿವೆ. ಅದರಲ್ಲಿ ಏನು ಪ್ರಸ್ತಾಪವಾಗಿದೆ ಎಂದು ನಾನು ಬಹಳ ವಿವರವಾಗಿ ತಮಗೆ ತಿಳಿಸಿಕೊಡುವುದಕ್ಕೋಸ್ಕರ ವಾಗಿ ಲಜಿಸ್ಲೇಚರ್ ಲೈಬ್ರರಿಯಿಂದ ರಿಪೋರ್ಟ್‌ನ್ನು ತರಿಸಲು ಪ್ರಯತ್ನ ಮಾಡಿದೆ. ಅಲ್ಲಿ ಸಿಗಲಿಲ್ಲ ಇದರ ಬಗ್ಗೆ ವಿವರಣೆ ಕೊಟ್ಟರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ತುಕೋಳ್ ಕಮೀಷನ್ ರಿಪೋರ್ಟ್‌ನಲ್ಲಿ ಡಿಪ್ಲೊಮೋ ಹೋಲ್ಡರ್ಸ್ ನಾನ್ ಡಿಪ್ಲೊಮೋ ಹೋಲ್ಡರ್ಸ್ ಬಗ್ಗೆ ಬಹಳ ವಿವರವಾಗಿ ಡೀಲ್ ಮಾಡಿ ಅವು ಎರಡೂ ಬೇರೆ ಬೇರೆ ಇರಬೇಕೆಂದು ಹೇಳಿದ್ದಾರೆ ಎಂದು ನನ್ನ ಅಭಿಪ್ರಾಯ. ಹಾಗಿದ್ದರೂ ಸಹ ಸರ್ಕಾರದವರು ಬೈ ಒವರ್‌ಸೈಟ್‌ನಿಂದ 1-1-1971 ರಿಂದ ಸ್ಕೇಲು 120ಕ್ಕೆ ಬದಲು 175ರ ಸ್ಕೇಲು ಕೊಟ್ಟಿದ್ದೇವೆ ಎಂದರೆ ಅದು ಅನುಮಾನಕ್ಕೆ ಆಸ್ಪದವಾಗುವುದು. ಜೂನಿಯರ್ ಇಂಜಿನಿಯರ್‌ಗಳು ಮತ್ತು ಡಿಪ್ಲೊಮೋ ಹೋಲ್ಡರ್ಸ್‌ಗಳ ಬಗ್ಗೆ ಇನ್ನೊಂದು ಬಿಲ್ ಇದೆ. ಜೂನಿಯರ್ ಇಂಜಿನಿಯರ್ಸ್ ಸ್ಕೇಲ್ ಮತ್ತು ಡಿಪ್ಲೊಮೋ ಹೋಲ್ಡರ್ಸ್ ಸ್ಕೇಲ್ ಒಂದೇ ಇರಬೇಕೆಂದು ಡಿಪ್ಲೊಮೋ ಹೋಲ್ಡರ್ಸ್ ಕೇಳುತ್ತಿದ್ದಾರೆ. ಡಿಗ್ರಿ ಹೋಲ್ಡರ್ಸ್ ಬೇರೆ ಇರಬೇಕೆಂದು ಹೇಳುತ್ತಿದ್ದಾರೆ. ಸ್ಟೇಟ ರಿಆರ್ಗನೈಸೇಶನ್ ಆಗುವ ಮೊದಲು ಬಾಂಬೆ ಕರ್ನಾಟಕದಲ್ಲಿ ಒಂದೇ ಆಗಿತ್ತು. ನನಗೆ ಅನುಮಾನ ಏನು ಎಂದರೆ ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಪ್ರಭಾವಶಾಲಿ ವ್ಯಕ್ತಿಗಳು ಸೇರಿ ಈ ರೀತಿ ಮಾಡಿದ್ದಾರೆ ಎಂದು ನನಗನಿಸುತ್ತದೆ. ಇದಕ್ಕೆ ಪುರಾವೆ ಕೊಟ್ಟರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಅದನ್ನು ಬಿಟ್ಟು ಸುಮ್ಮನೆ ನಮ್ಮ ಇನ್‌ಟೆನ್‌ಷನ್ ಆ ರೀತಿ ಇರಲಿಲ್ಲ ಎಂದರೆ ಒಪ್ಪುವುದಕ್ಕೆ ಬಹಳ ಕಷ್ಟವಾಗುತ್ತದೆ. ಎರಡನೆಯದು ಹೈಕೋರ್ಟಿನಲ್ಲಿ ರಿಟ್ ಅಪ್ಲಿಕೇಶನ್‌ಗೆ ಏನು ರಿಪ್ಲೈ ಬರೆದಿದ್ದೀರಿ, ಅದರಲ್ಲಿ ನಮ್ಮ ಇನ್‌ಟೆನ್‌ಷನ್ ಆರೀತಿ ಇರಲಿಲ್ಲ, ಇನ್‌ಅಡ್ವರ್‌ಟೆಂಟ್ ಆಗಿ ಹಾಕಿದ್ದೇವೆ ಎಂದು ಹೇಳಿದ್ದೀರಾ ಎನ್ನುವುದು ನಮಗೆ ಗೊತ್ತಿಲ್ಲ. ಆದರೂ ಸಹ ಈರೀತಿ ಇನ್‌ಅಡ್ವರ್‌ಟೆಂಟ್ ಆಗಿ ಆಗಿ ಹೋಗಿದೆ ಎಂದು ಹೇಳಿದ್ದೀರಾ? ಒಂದು ಪಕ್ಷ ತಾವು ಆರೀತಿ ಹೇಳೇ ಇಲ್ಲ ಎಂದು ಇಟ್ಟುಕೊಳ್ಳೋಣ. ಆಗ ಏನು ಹೇಳದೆ ಈಗ ಅನ್ ಇನ್‌ಟೆನ್‌ಶನಲಿ, ಮತ್ತು ಇನ್‌ಅಡ್ವರ್‌ಟೆಂಟ್‌ಆಗಿ ಮಾಡಿದ್ದೇವೆ ಎಂದು ಹೇಳಿದರೆ ತೊಂದರೆ ಬರುತ್ತದೆ. ಆಗ ನಿಮ್ಮ ವಾದಕ್ಕೆ ಕೊಡಲಿ ಪೆಟ್ಟು ಹಾಕಿದಂತಾಗುತ್ತದೆ. ರಿಟ್ ಅಪ್ಲಿಕೇಶನ್‌ಗೆ ಕೌಂಟರ್ ಹಾಕುವಾಗ ನೀವೇನು ಹೇಳದೆ ಈಗ ಇನ್‌ಅಡ್ವರೆಂಟಾಗಿ ಆಗಿದೆ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹಿಂದೆ ಇನ್‌ಅಡ್ವರ್‌ಟೆಂಟಾಗಿ ಮಾಡಿದ್ದೀರಿ ಎಂದು ರಿಟ್ ಅಪ್ಲಿಕೇಶನ್‌ಗೆ ಕೌಂಟರ್ ಮಾಡಿದಾಗ ಹೇಳಿದ್ದರೆ ಆಗ ಕೋರ್ಟಿನವರು ಅದನ್ನು ಕನ್‌ಸಿಡರ್ ಮಾಡಿರುವುದರಿಂದ 175 ಕೊಡಬೇಕು, 120 ಕೊಡುವ ಹಾಗೆ ಇಲ್ಲ. ಆರ್ಟಿಕಲ್ 309ರ ಪ್ರಕಾರ ಕೊಡಬೇಕಾಗಿ ಬರುತ್ತದೆ. Of course, you are well within your rights to bring a legislation later on. That is another matter. ನೀವು ಹೈಕೋರ್ಟಿನ ಕೌಂಟರ್‌ನಲ್ಲಿ ಏನು ಹೇಳಿದ್ದೀರಿ ಎಂದು ನಮಗೆ ಗೊತ್ತಾಗಬೇಕು. ನಿಜವಾಗಿಯೂ ಇನ್‌ಟೆನ್‌ಶನ್ ಆದೇ ರೀತಿ ಇದ್ದಿದ್ದರೆ ಹೇಳಬೇಕಿತ್ತು.

ಇನ್ನು ಮೂರನೆ ಅಂಶ ಏನು ಎಂದರೆ ಅದು ಸರ್ಕಾರದ ಅದಕ್ಷತೆಯ ಪರಮಾವಧಿಯನ್ನು ತೋರಿಸುತ್ತದೆ. ಒಬ್ಬ ಕ್ಲಾರ್ಕ್ 120—125 ಇರುವುದನ್ನು 170—175 ಮಾಡಿದ್ದರೆ ಅದು ಬೈ ಮಿಸ್ಟೇಕ್, ಟೈಪೋಗ್ರಫಿಕಲ್ ಎರರ್, ಕ್ಲರಿಕಲ್ ಎರರ್ ಇರಬಹುದು ಎಂದು ಹೇಳಬಹುದು. ನೀವು ಡಿಯರ್‌ನೆಸ್ ಅಲೋಯೆನ್ಸ್ 3-4 ಕಂತುಗಳು ಕೊಡಬೇಕಾಗಿದೆ. ಅದನ್ನು ಕೊಡದೇ ಇರುವುದರಿಂದ ಡಿಸ್ಸಾಟಿಸ್‌ಫೈ ಆಗಿ ಮಾಡಿರಬಹುದು ಎಂದು ಹೇಳಬಹುದು. ಆ ಪ್ರಶ್ನೆ ಇಲ್ಲ. ಸ್ಕೇಲು ಬೇರೆಬೇರೆ ಸ್ಕೇಲ್ ಬಿಟ್ಟು ಬಿಟ್ಟಿದ್ದಾರೆ ಎಂದರೆ ಬಿಟ್ಟಿಲ್ಲ, ಎರಡೂ ಒಟ್ಟಿಗೆ ಸೇರಿಸಿದ್ದಾರೆ ಇನ್‌ಅಡ್ವರ್ಟೆಂಟ್ ಆಗಿ ಮಾಡಿದ್ದಾರೆ ಎಂದು ಹೇಳಿದರೆ ಹೇಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯ? ನೀವು

ಸರಿಯಾದ ಪುರಾವೆ ಕೊಟ್ಟರೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಹೈಕೋರ್ಟ್ ತೀರ್ಮಾನ ಮಾಡಿದ್ದಾರೆ. ಒಬ್ಬರ ವಿಷಯಕ್ಕೆ ತೀರ್ಮಾನ ಮಾಡಿರುವುದರಿಂದ ಆ ಒಬ್ಬರ ವಿಷಯಕ್ಕಾಗಿಯೇ ಚರ್ಚೆಗೆ ತಗೆದುಕೊಂಡು ಬರಬೇಕೇ ? ಇದರಲ್ಲಿ ಹೇಳಿದ್ದಾರೆ. "This Act may be called the Karnataka Civil Services (Revision of Pay of Certain Categories of Posts) Act, 1975 ; It shall be deemed to have come into force on the eleventh day of December, 1974." 1974ನೇ ಡಿಸೆಂಬರ್‌ನಿಂದ ಇದನ್ನು ಜಾರಿಗೆ ತರಬೇಕು ಎಂದು ಅರ್ಥವಾಗುತ್ತದೆ. ಎಂದರೆ 11-12-1974 ಮತ್ತು ಅದಕ್ಕಿಂತ ಮುಂದೆ ಏನೇನು ಕೊಡುತ್ತಾರೆ ಅದಕ್ಕೆ ಎರಡು ರೀತಿಯ ಸಂಬಳವನ್ನು ಡಿಪ್ಲೊಮಾ ಹೋಲ್ಡರ್ಸ್ ಮತ್ತು ನಾನ್ ಡಿಪ್ಲೊಮಾ ಹೋಲ್ಡರ್ಸ್‌ಗೆ ಕೊಡಬೇಕು ಎಂದು ಅರ್ಥವಾಗುತ್ತದೆ. ಈಗಾಗಲೇ ಹೈಕೋರ್ಟ್ ಯಾರ ಪರವಾಗಿ ತೀರ್ಮಾನ ಕೊಟ್ಟಿದೆ ಅಂಥವರಿಗೂ ಡಿನೈ ಮಾಡುತ್ತೀರಾ ? ಡಿನೈ ಮಾಡುವುದು ಸರಿಯೇ ಎನ್ನುವುದು ನನ್ನ ವಾದ. ಇದರಿಂದ ಹೈಕೋರ್ಟಿನ ತೀರ್ಮಾನಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಿದ್ದಾರೆನ್ನುವ ಅಭಿಪ್ರಾಯ ಬರುವುದಕ್ಕೆ ಸಾಧ್ಯವಿಲ್ಲವೇ ? ಇದರಲ್ಲಿ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಎಂದು ಕರೆಕ್ಟ್ ಮಾಡಿರುವ ಮಟ್ಟಿಗೆ ನನಗೆ ಕಂಡುಬರುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರು ಕ್ಲಾಜ್ ಎರಡನ್ನು ಓದಿದರೆ ಗೊತ್ತಾಗುತ್ತದೆ. ಅದರಲ್ಲಿ ಕೊಟ್ಟಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕರೆಕ್ಟ್ ಮಾಡಿಕೊಳ್ಳುವ ಪರಿಸ್ಥಿತಿ ಇನ್‌ಅಡ್ವರ್ಟೆಂಟ್ ಆಗಿರುವುದರಿಂದ ಬಂದಿದೆಯೆನ್ನುವುದನ್ನು ಒಪ್ಪಿಕೊಳ್ಳುವುದಕ್ಕೆ ಕಷ್ಟ. ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸುವುದಕ್ಕೆ ಸಾಧ್ಯವೇ ? ಇಲ್ಲದೆ ಹೋದರೆ ಇದು ಸರ್ಕಾರದ ಅದಕ್ಷತೆಯನ್ನು ತೋರಿಸುತ್ತದೆಂದು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಈಗ್ಗೆ ಚರ್ಚೆಯಲ್ಲಿರತಕ್ಕ ಮಸೂದೆಯನ್ನು ಕೆಲವು ಕಾರಣಗಳಿಗಾಗಿ ನಾನು ವಿರೋಧಿಸಬೇಕಾಗಿದೆ. ಮೊದಲನೆಯದಾಗಿ ಮಾನ್ಯ ಅರ್ಥ ಮಂತ್ರಿಗಳು ಮಸೂದೆಯನ್ನು ಸಭೆಯ ಅವಗಾಹನೆಗೆ ಮಂಡಿಸತಕ್ಕ ಸಮಯದಲ್ಲಿ ಸರ್ಕಾರ ಮಾಡಿರುವ ತಪ್ಪನ್ನು ತಪ್ಪು ಬುದ್ಧಿಪೂರ್ವಕವಾಗಿ ಮಾಡಿದ್ದಲ್ಲ ಈ ಒಂದು ಶಾಸನವನ್ನು ಮಾಡುವುದರ ಮೂಲಕ ತಿದ್ದಿಕೊಳ್ಳತಕ್ಕ ಕೆಲಸ ಮಾಡುತ್ತೇವೆಂದು ಹೇಳಿದರು. ಬುದ್ಧಿಪೂರ್ವಕವಾಗಿ ಮಾಡಿದಂಥ ತಪ್ಪಲ್ಲ ಎನ್ನುವವಾದ ನಂಬುವುದಕ್ಕೆ ಸಾಧ್ಯವಿಲ್ಲದ ವಾದ. 1971ರಲ್ಲಿ ವಿವಾದಕ್ಕೆ ಒಳಪಟ್ಟಿರತಕ್ಕ ಸರ್ಕಾರಿ ಹುಕುಂ ಹೊರಟಿರತಕ್ಕದ್ದು. ಆ ಹುಕುಮನ್ನು ಪ್ರಶ್ನೆ ಮಾಡಿ ನೊಂದಂಥ ಒಬ್ಬ ವ್ಯಕ್ತಿ ಶ್ರೇಷ್ಠ ನ್ಯಾಯಾಲಯದ ಮುಂದೆ ರಿಟ್ ಪಿಟಿಷನ್ ಮೂಲಕ ಹೋಗಿರತಕ್ಕದ್ದು. ಅದರಲ್ಲಿ ತೊಂದರೆ ಏನಾಗಿದೆ, ಆಗಿರುವ ಕೊರತೆ ಏನು, ನೋವು ಏನು ಎಂದು ಸಹಜವಾಗಿ ವ್ಯಕ್ತಪಡಿಸಿರುತ್ತಾರೆ. ಅಂದ ಮೇಲೆ ಸರ್ಕಾರ ಮಾಡಿರತಕ್ಕ ತಪ್ಪನ್ನು 1972ನೇ ಇಸವಿಯಿಂದ ಆತ ಸರ್ಕಾರದ ಗಮನಕ್ಕೆ ತಂದಿದ್ದಾನೆ. 1972ರಲ್ಲಿ ಸರ್ಕಾರ ಮಾಡಿರತಕ್ಕ ತಪ್ಪನ್ನು ಅವರ ಗಮನಕ್ಕೆ ತಂದಾಗ್ಯೂ ಕೂಡ 1974ರವರೆಗೆ ಅವರು ಕೈಕಟ್ಟಿ ಕುಳಿತುಕೊಳ್ಳುವುದರ ಅರ್ಥವೇನು ? ಅದಕ್ಕೆ ಮಾನ್ಯ ಮಂತ್ರಿಗಳ ಸಮಜಾಯಿಸಿಬೇಕು. ಎರಡು ವರ್ಷಗಳ ಕಾಲ ಯಾವ ವಿಧವಾದ ವಿಚಾರವನ್ನೂ ಮಾಡದೆ ತೆಪ್ಪಗೆ ಕುಳಿತಿದ್ದರಿಂದ ಇಷ್ಟೊಂದು ತೊಂದರೆಗೆ ಅವಕಾಶವಾಯಿತು. ಸರ್ಕಾರ ತಪ್ಪನ್ನು ಒಪ್ಪಿಕೊಳ್ಳುತ್ತದೆ. ಆದರೆ ತಪ್ಪಿಗೆ ಶಿಕ್ಷೆ ಮಾತ್ರ ಬೇರೆಯವರು ಅನುಭವಿಸಬೇಕು ಎಂದು ಹೇಳುತ್ತಾರೆ. ಇದರಲ್ಲಿ ಯಾವ ನ್ಯಾಯವಿದೆ ? ಸರ್ಕಾರ ತಪ್ಪು ಮಾಡಿದ ಮೇಲೆ ಸರ್ಕಾರವೇ ಆ ಶಿಕ್ಷೆಯನ್ನು ಅನುಭವಿಸಬೇಕು. ಬುದ್ಧಿಪೂರ್ವಕವಾಗಿ ಆಗಿರಲಿ, ಆಕಸ್ಮಿಕವಾಗಿ ಆಗಿರಲಿ ತಪ್ಪು ತಪ್ಪೇ. ತಪ್ಪಿಗೆ ಶಿಕ್ಷೆಯನ್ನು ಸರ್ಕಾರ ಅನುಭವಿಸಬೇಕೇ ಹೊರತು ಯಾರು ತಪ್ಪು ಹುಕುಂನಿಂದ ತೊಂದರೆಗೆ ಈಡಾಗಿದ್ದಾರೆ ಅವರು ಆ ಶಿಕ್ಷೆಯನ್ನು ಅನುಭವಿಸಬೇಕು ಎಂದು ಹೇಳತಕ್ಕದ್ದು ಧರ್ಮಕ್ಕೆ, ನ್ಯಾಯಕ್ಕೆ ವಿರೋಧವಾದ ಮಾತು ಎಂದು ಹೇಳಬೇಕಾಗಿದೆ. ಈಗಾಗಲೆ ಶ್ರೇಷ್ಠ ನ್ಯಾಯಾಲಯಕ್ಕೆ ಈ ವಿಷಯವನ್ನು ತೆಗೆದುಕೊಂಡು ಹೋಗಿದ್ದು ನ್ಯಾಯಾಲಯದವರು ಒಂದು ಆಜ್ಞೆಯನ್ನು ಹೊರಡಿಸಿ ಸರ್ಕಾರ ಮಾಡಿರತಕ್ಕ ತಪ್ಪನ್ನು ಸಹ ತೋರಿಸಿಕೊಟ್ಟು ಎಲ್ಲರಿಗೂ ಆ ಪೆಸ್ಕೇಲ್ ಸಿಕ್ಕಬೇಕು, ಡಿಪ್ಲೊಮಾ ಹೋಲ್ಡರ್ಸ್ ಮತ್ತು ನಾನ್ ಡಿಪ್ಲೊಮಾ ಹೋಲ್ಡರ್ಸ್ ಆಗಿರಲಿ ಒಂದೇ ಪೆಸ್ಕೇಲ್ ದೊರೆಯಬೇಕು ಎಂದು ತೀರ್ಪು ಕೊಟ್ಟಿರುವಾಗ ಅದರಂತೆ ನಡೆಯಬೇಕಾದ್ದು ನ್ಯಾಯ ದೃಷ್ಟಿಯಿಂದ ಸರಿ ಎಂದು ನಾನು ಈ ಸಂದರ್ಭದಲ್ಲಿ ನನ್ನ ವಾದವನ್ನು ಮಂಡಿಸುತ್ತೇನೆ. ಮೂರು ವರ್ಷ ಕಾಲ ಎಷ್ಟು ಹಣ ಬರುತ್ತದೆಂದು ನೌಕರರಲ್ಲಿರೂ ಒಂದು

ಅಂದಾಜು ಮಾಡಿಕೊಂಡಿರುತ್ತಾರೆ ಕೆಲ್ಲವರು ಕೋರ್ಟಿಗೆ ಹೋಗಿದ್ದು ಹಣ ಬರುತ್ತದೆ ಎನ್ನುವ ನಿರೀಕ್ಷೆಯಲ್ಲಿದ್ದಾರೆ. ಅಂಥವರಿಗೆ ಕೂಡ ನಾವು ಮಾಡಿರುವ ತಪ್ಪಿಗೆ ಶಿಕ್ಷೆ ಕೊಡುವುದು ಖಂಡನೀಯ

ಸರ್ಕಾರ ಮಾಡಿದಂಥ ತಪ್ಪನ್ನು ತಿದ್ದಿಕೊಳ್ಳತಕ್ಕ ಕಾಲದಲ್ಲಿ ಆಗಾಗ್ಗೆ ಶ್ರೇಷ್ಠ ನ್ಯಾಯಾಲಯದವರು ಏನು ಆದೇಶವನ್ನು ಸರ್ಕಾರಕ್ಕೆ ಕೊಡುತ್ತಾರೆ, ಕೆಲವು ತೀರ್ಪುಗಳನ್ನು ಕೊಡುವುದರ ಮೂಲಕ ತಿಳಿಸುತ್ತಾರೆ. ಅವುಗಳನ್ನು ಸುಗ್ರೀವಾಜ್ಞೆಗಳ ಮೂಲಕ ತಲೆಕೆಳಗು ಮಾಡತಕ್ಕದ್ದು, ತೀರ್ಪುಗಳನ್ನು ಉಲ್ಲಂಘಿಸಿ ನಡೆಯತಕ್ಕ ಪ್ರಯತ್ನ ಮಾಡುವುದು ಅಷ್ಟು ಸರಿಯಾದುದಲ್ಲ. ಯಾವ ತಪ್ಪು ಮಾಡಲಿ ಅವನ್ನು ಮುಚ್ಚಿಡುವುದಕ್ಕೆ ಸುಗ್ರೀವಾಜ್ಞೆಗಳನ್ನು ಹೊರಡಿಸತಕ್ಕ ಪದ್ಧತಿ ಈ ಸರ್ಕಾರಕ್ಕೆ ಯಾವ ವಿಧವಾದ ಗೌರವವನ್ನೂ ತರತಕ್ಕುದಲ್ಲ. ಶಾಸನ ಸಭೆಗಳ ಅಧಿವೇಶನ ನಡೆಯುತ್ತಿರಲಿಲ್ಲವಾದ್ದರಿಂದ ಸುಗ್ರೀವಾಜ್ಞೆಗಳನ್ನು ಹೊರಡಿಸಬೇಕಾಯಿತು ಎಂದು ಅರ್ಥ ಮಂತ್ರಿಗಳು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳಿದ್ದಾರೆ. ಒಂದು ವರ್ಷದ ಕೆಳಗೆ ಹೈಕೋರ್ಟಿನ ತೀರ್ಮಾನವಾಗಿದೆ. ಅಲ್ಲಿಂದ ಅಸೆಂಬ್ಲಿ ಸೆಕ್ಷನ್ ಇರಲಿಲ್ಲವೇ ? ಇದು ಕೂಡ ಸತ್ಯಕ್ಕೆ ದೂರವಾದ ಮಾತು. ಕಾರಣಗಳನ್ನು ಕೊಡುವಾಗ ಸಹ ನಿಜವಾದ ಕಾರಣಗಳನ್ನು ಸರ್ಕಾರ ಕೊಡಬೇಕು ಎಂದು ಅಪೇಕ್ಷೆ ಮಾಡುವುದು ಬಹುಶಃ ನಮ್ಮ ಸ್ವಾತಂತ್ರ್ಯವನ್ನು, ಹಕ್ಕನ್ನು ಮೀರಿ ಕೇಳಿದಂಥ ಪ್ರಶ್ನೆ ಎಂದು ತಾವಾದರೂ ಭಾವಿಸಬಾರದು. ಈ ವಿಧವಾದ ಸುಗ್ರೀವಾಜ್ಞೆಗಳನ್ನು ಹೊರಡಿಸಿ ನ್ಯಾಯಾಲಯ ಕೊಟ್ಟ ತೀರ್ಪನ್ನು ಉಲ್ಲಂಘನೆ ಮಾಡತಕ್ಕದ್ದು ಆಗಲೀ, ಅಥವಾ ನ್ಯಾಯಾಲಯವನ್ನು ಕಾರ್ಯಾಂಗದ ಅಥವಾ ಸರ್ಕಾರದ ಅಧೀನ ಪಡಿಸಿಕೊಳ್ಳತಕ್ಕ ಒಂದು ಪ್ರಯತ್ನವೇ ಆಗಲೀ ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿಯಾದ ನಡವಳಿಕೆ ಸಹ ಆಗುತ್ತದೆ.

ನ್ಯಾಯಾಂಗ ಯಾವ ತೀರ್ಪನ್ನೇ ಕೊಡಲಿ ಅದಕ್ಕೆ ಸಂಪೂರ್ಣವಾದ ಗೌರವವನ್ನು ಕೊಡತಕ್ಕದ್ದು ಪ್ರಜಾಪ್ರಭುತ್ವದ ದೃಷ್ಟಿಯಿಂದ, ಕಾನೂನಿನ ಹಿರಿಮೆಯನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಸರ್ಕಾರದವರು ಮಾಡಬೇಕಾದ್ದು ಬಹಳ ಅವಶ್ಯಕವಾಗಿದೆ.

ಇನ್ನೊಂದು ವಿಷಯವನ್ನು ಸಭೆಯ ಗಮನಕ್ಕೆ ತಮ್ಮ ಮೂಲಕ ತರಬೇಕಾಗಿದೆ. ಡಿಪ್ಲೊಮಾ ಹೋಲ್ಡರ್ಸ್ ಮತ್ತು ನಾನ್ ಡಿಪ್ಲೊಮಾ ಹೋಲ್ಡರ್ಸ್‌ಗೆ ಇರತಕ್ಕ ಪೇಸ್ಕೇಲಿನ ಅಂತರ ಬಹಳ ಹೆಚ್ಚು ಎಂದು ಕಾಣಬಹುದು. ಯಾವ ಕೆಲಸವನ್ನು ಡಿಪ್ಲೊಮಾ ಹೋಲ್ಡರ್ಸ್ ಮಾಡುತ್ತಿದ್ದರೋ ಅದೇ ಕೆಲಸವನ್ನು ಇಲ್ಲಿ ನಾನ್ ಡಿಪ್ಲೊಮಾ ಹೋಲ್ಡರ್ಸ್ ಸಹ ಮಾಡಿಕೊಂಡು ಬಂದಿದ್ದಾರೆ. ಆದರೂ ಸಹ ಇಲ್ಲಿ ಇವರಿಬ್ಬರ ನಡುವೆ ಇಟ್ಟಿರುವ ಸಂಬಳ ಮತ್ತು ಭತ್ಯದ ಅಂತರ ಏನಿದೆ, ಇದು ಬಹಳ ಹೆಚ್ಚಾಗಿ ಕಾಣುತ್ತದೆ. ಇದು ಸರಿಯಲ್ಲ : ಈ ಒಂದು ಅಂತರವನ್ನು ಕಡಿಮೆ ಮಾಡಬೇಕು. ನಾನ್ ಡಿಪ್ಲೊಮಾ ಹೋಲ್ಡರ್ಸ್ ನ್ಯಾಯಾಲಯದ ಕಟ್ಟೆ ಹತ್ತಿ, ಅಲ್ಲಿಯ ಒಂದು ತೀರ್ಪಿನಿಂದ ತಮ್ಮ ಮುಂದಿನ ಭವಿಷ್ಯ ಒಳ್ಳೆಯದಿದೆ ಎಂದುಕೊಂಡಿದ್ದರು. ಆದಕಾರಣ ಈ ಒಂದು ಅಂತರವನ್ನು ಕಡಿಮೆ ಮಾಡಿದರೆ ಅವರಿಗೆ ನ್ಯಾಯವನ್ನು ದೊರಕಿಸಿಕೊಟ್ಟಂತೆ ಆಗುತ್ತದೆ. ಈ ಒಂದು ಕೆಲಸವನ್ನು ಸರ್ಕಾರದವರು ಮಾಡುವುದರಿಂದ ನೊಂದಿರುವ ಜನರಿಗೆ ನ್ಯಾಯವನ್ನು ದೊರಕಿಸಿಕೊಟ್ಟಂತೆ ಆಗುತ್ತದೆ ಎಂದು ಹೇಳಿ, ಇಷ್ಟು ಹೇಳಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೇರೆ).—ಮಾನ್ಯ ಉಪಾಧ್ಯಕ್ಷರೇ, Karnataka Civil Services (Revision of Pay of certain categories of Posts) Bill 1975 ಇದನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಹಿಂದಿನ ಸರ್ಕಾರದವರು ಈ ಬಗೆ ಮಾಡಿದ ತಪ್ಪನ್ನು ನಾವು ಸರಿಯಾಗಿ ನೋಡಲಿಲ್ಲ, ಅದಕ್ಕಾಗಿ ಈ ಬಿಲ್‌ನ್ನು ತರಬೇಕಾಯಿತು ಎಂದು ಹೇಳುತ್ತಿದ್ದಾರೆ. ಆದರೆ ಹಿಂದಿನ ಸರ್ಕಾರದವರು ಕಾಮನ್ ಸ್ಕೇಲ್ ಮಾಡಿದ್ದು ಸರಿ ಎಂದು ನನ್ನ ಅಭಿಪ್ರಾಯವಾಗಿದೆ. ಇಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸರ್ಟಿಫಿಕೇಟ್ ಪಡೆದಿರುವವರು ಇದ್ದಾರೆ ಮತ್ತು ಡಿಪ್ಲೊಮಾ ಹೋಲ್ಡರ್ಸ್ ಸಹ ಇದ್ದಾರೆ. ಆದರೆ ಇವರಿಬ್ಬರೂ ಮಾಡುತ್ತಿರುವ ಕೆಲಸ ಒಂದೇ ಆಗಿದೆ. ಡಿಪ್ಲೊಮಾ ಹೋಲ್ಡರ್ಸ್‌ಗೆ ಜಾಸ್ತಿ ಕ್ವಾಲಿಫಿಕೇಷನ್ ಇದ್ದರೂ ಸಹ ಮಾಡುವ ಕೆಲಸ ಒಂದೇ ಆದ್ದರಿಂದ ಕಾಮನ್ ಸ್ಕೇಲ್ ಮಾಡಿದ್ದರು. ಈ ವಿಚಾರದಲ್ಲಿ ಕಾನೂನು ಇಲಾಖೆಯವರು ತಮ್ಮ ಒಂದು ಸಲಹೆ ಕೊಟ್ಟಿರುವುದು ಸಹ ಸರಿಯಾಗಿದೆ. ಮತ್ತು ಹಿಂದಿನ ಸರ್ಕಾರದವರು ಕಾಮನ್ ಸ್ಕೇಲ್ ಮಾಡಿರುವುದು ಸರಿಯಾಗಿದೆ. ಇಂಡಸ್ಟ್ರಿಯಲ್ ಟ್ರೈನಿಂಗ್ ಸರ್ಟಿಫಿಕೇಟ್ ಪಡೆದಿರುವವರು ಮಾಡುವ ಕೆಲಸಕ್ಕೆ ಈ ಡಿಪ್ಲೊಮಾ ಹೋಲ್ಡರ್ಸ್ ವಾಲಂಟರಿಯಾಗಿ ಬಂದು ಸೇರಿ

ಕೊಂಡಿದ್ದಾರೆ. ಆ ರೀತಿಯಿರುವಾಗ ಸಂಬಳದಲ್ಲಿ ಏತಕ್ಕೆ ವ್ಯತ್ಯಾಸ ಮಾಡಬೇಕು ಎಂದು ಕೇಳಬೇಕಾಗಿದೆ. ಉದಾಹರಣೆಗೆ ಎಂ.ಎ. ಮಾಡಿಕೊಂಡವರು ಎರಡನೇ ದರ್ಜೆಯ ಗುಮಾಸ್ತನ ಕೆಲಸಕ್ಕೆ ಬಂದು ಸೇರಿಕೊಂಡು ಲೆಕ್ಚರರ್‌ಗೆ ಕೊಡುವ ಸಂಬಳ ಕೊಡಿ ಎಂದು ಕೇಳಿದರೆ ಅದು ಸಾಧ್ಯವೇ.? ಈ ಒಂದು ಕಾರಣದಿಂದ ಕಾಮನ್ ಪೇ-ಸ್ಕೇಲ್ ಇರುವುದು ಒಳ್ಳೆಯದೆಂದು ಹೇಳುತ್ತೇನೆ. ಡಿಪ್ಲೋಮಾ ಹೋಲ್ಡರ್ಸ್‌ಗೆ ಒಂದು ಪ್ರತ್ಯೇಕವಾದ ಪೇ-ಸ್ಕೇಲ್ ಇರುವುದು ಸರಿಯಲ್ಲ; ಇದರಿಂದ ಇಂಡಸ್ಟ್ರಿಯಲ್ ಟ್ರೈನಿಂಗ್ ಸರ್ಟಿಫಿಕೇಟ್ ಪಡೆದಿರುವವರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಆದಕಾರಣ ಕಾಮನ್ ಪೇ-ಸ್ಕೇಲ್ ಇರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಬಿಲ್‌ನ್ನು ಮಾಡಿಸುವಾಗ ಏನು ಹೇಳಿದರು ಎಂದರೆ, ಕೈತಪ್ಪಿ ಆಗಿರುವ ಅಚಾತುರ್ಯವನ್ನು ಸರಿಪಡಿಸುವುದಕ್ಕಾಗಿ ಈ ಬಿಲ್‌ನ್ನು ತಂದಿದ್ದೇವೆ, ಇದಕ್ಕೆ ಮೊದಲು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದೇವೆ, ಅದರ ಜಾಗದಲ್ಲಿ ಈ ಬಿಲ್‌ನ್ನು ತಂದಿದ್ದೇವೆ ಎಂದು. ಇಂದು ಸರ್ಕಾರೀ ನೌಕರರ ಸಂಬಳಸಾರಿಗೆಗಳನ್ನು ನಿಗದಿ ಮಾಡುವಾಗ ಮತ್ತು ಅವರಿಗೆ ಮುಂದಿನ ಭಡ್ತಿ ನೀಡುವಾಗ ಸೆಕ್ರೆಟೇರಿಯಟ್‌ನಲ್ಲಿರತಕ್ಕಂಥ ಅಧಿಕಾರಿಗಳಿಗೆ ಇಷ್ಟಿಷ್ಟು ಸಲ್ಲಿಸಬೇಕಾಗುತ್ತದೆ ಎಂಬತಕ್ಕಂಥ ಒಂದು ಸುದ್ದಿಯನ್ನು ನಾನು ಅನೇಕ ಸರ್ಕಾರೀ ನೌಕರರ ಮೂಲಕ ಕೇಳಿದ್ದೇನೆ. ಅದಕ್ಕೆ ಸಾಕ್ಷೀಭೂತವಾಗಿ ಈ ಒಂದು ಬಿಲ್‌ನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಮತ್ತು ನಾನು ಕೇಳಿದಂಥ ಸುದ್ದಿ ನಿಜವಾಯಿತು ಎಂಬುದಕ್ಕೆ ಈ ಬಿಲ್ ಸಾಕ್ಷೀಭೂತವಾಗಿದೆ. ಇಂತಹ ಒಂದು ಮುಖ್ಯವಾದ ಪ್ರಶ್ನೆಯ ವಿಚಾರದಲ್ಲಿ ಮತ್ತು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ವ್ಯವಹಾರದಲ್ಲಿ ಕೈತಪ್ಪಿ ಅಚಾತುರ್ಯವಾಗಿದೆ ಎಂಬುದನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ. ಜೊತೆಗೆ ಇದು ರೆಟ್ರಾಸ್ಪೆಕ್ಟೀವ್ ಎಫೆಕ್ಟ್‌ನಿಂದ ಜಾರಿಗೆ ಬರುತ್ತದೆಂದು ಹೇಳಿದ್ದಾರೆ. ಮಾನ್ಯ ಕೃಷ್ಣಪ್ಪನವರು ಹೇಳಿದಂತೆ ಕೋರ್ಟಿನ ತೀರ್ಮಾನವನ್ನು ವಿಫಲಗೊಳಿಸುವುದಕ್ಕೋಸ್ಕರ ಈ ಬಿಲ್‌ನ್ನು ತಂದಿದ್ದಾರೆ. ಮೊನ್ನೆ ತಾನೆ ಕೇಂದ್ರ ಸರ್ಕಾರದವರು ಚುನಾವಣೆಗೆ ಸಂಬಂಧಪಟ್ಟಂತೆ ಇರುವ ಪೀಪಲ್ ರೆಪ್ರೆಜೆಂಟೇಷನ್ ಆಕ್ಟ್‌ಗೆ ಹಿಂದಿನಿಂದ ಜಾರಿಗೆ ಬರುವಂತೆ ಒಂದು ತಿದ್ದುಪಡಿಯನ್ನು ಮಾಡಿದರು. ಮತ್ತು ಆ ವಿಚಾರದಲ್ಲಿ ಸಹ ಒಂದು ಸುಗ್ರೀವಾಜ್ಞೆ ಹೊರಡಿಸಿದ್ದು ಇಡೀ ದೇಶಕ್ಕೇ ಗೊತ್ತಿದೆ. ಇವರೇ ರಚನೆ ಮಾಡಿರುವ ರಾಜ್ಯಾಂಗದ ಪ್ರಕಾರ ನ್ಯಾಯಾಲಯಗಳು ಕೊಡುವ ತೀರ್ಪನ್ನು ಜಾರಿಗೆ ತರುವುದರ ಬದಲು ಅವನ್ನು ವಿಫಲಗೊಳಿಸಲು ಇಂತಹ ಬಿಲ್‌ಗಳನ್ನು ತರುತ್ತಿದ್ದಾರೆ. ಕೇಂದ್ರ ಸರ್ಕಾರದವರು ಹಿಡಿದಿರುವ ಜಾಡನೇ ಇವರು ಅನುಸರಿಸುತ್ತಿದ್ದಾರೆಂದು ಹೇಳಬಹುದು. ನನಗೆ ನ್ಯಾಯಾಂಗದಲ್ಲಿ ನಂಬಿಕೆ ಇದೆಯೋ ಅಥವಾ ಇಲ್ಲವೋ ಎಂಬುದು ಬೇರೆ ಪ್ರಶ್ನೆ. ಆದರೆ ಅಧಿಕಾರ ನಡೆಸುವವರು ಅದರಲ್ಲಿ ನಂಬಿಕೆ ಇಟ್ಟಿರುವ ಕಾರಣದಿಂದ ಅವರ ಒಂದು ತೀರ್ಪಿಗೆ ಮನ್ನಣೆ ಕೊಡಬೇಕು. ಈ ರೀತಿಯಾದಂಥ ಅಚಾತುರ್ಯ ಇನ್ನು ಮುಂದೆಯಾದರೂ ಸಹ ಆಗದಂತೆ ಶ್ರದ್ಧೆ ವಹಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಅರ್ಥ ಸಚಿವರಿಗೆ ಒಂದು ಸೂಚನೆ ಕೊಡಬಯಸುತ್ತೇನೆ. ಮೂರೂವರೆ ಲಕ್ಷ ಸರ್ಕಾರೀ ನೌಕರರಿಗೆ ಸಂಬಂಧಪಟ್ಟಂತೆ ಈ ರೀತಿಯ ಅಚಾತುರ್ಯ ನಡೆದಿರಬೇಕಾದರೆ ಇನ್ನು ಮೂರು ಕೋಟಿ ಜನರ ವಿಚಾರದಲ್ಲಿ ಎಷ್ಟೊಂದು ಅಚಾತುರ್ಯ ನಡೆದಿರಬಹುದು ಎಂಬತಕ್ಕಂಥ ವಿಚಾರ ಊಹೆಗೂ ನಿಲುಕದ ಪ್ರಶ್ನೆಯಾಗಿದೆ. ಈ ಇಲಾಖೆಯವರು ಇನ್ನು ಮುಂದೆ ಯಾದರೂ ಎಚ್ಚರಿಕೆಯಿಂದ ವರ್ತಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ಬಿಲ್‌ನ ವಿಚಾರದಲ್ಲಿ ಮಾನ್ಯ ಕೃಷ್ಣನ್ ಅವರು ಹೇಳಿದ ಹಾಗೆ, ಸರ್ಕಾರದವರು ಹೇಳಿಕೊಂಡಿರುವ ರೀತಿಯಲ್ಲಿ ಇದು ಅಚಾತುರ್ಯದಿಂದ ನಡೆದಿದೆ ಅನ್ನತಕ್ಕಂಥದ್ದನ್ನು ನಂಬುವುದಕ್ಕೆ ಸಾಧ್ಯವಿಲ್ಲದ ಪ್ರಸಂಗದಲ್ಲಿದ್ದೇವೆ. ಕಾರಣ ಏನೆಂದರೆ ಇದು ಅಚಾತುರ್ಯದಿಂದ ನಡೆದಿದ್ದರೆ ಈ ಬಗ್ಗೆ ರಿಟ್ ಪಿಟಿಷನ್ ಹಾಕಿದ ಕೂಡಲೆ ಇದನ್ನು ಸರಿಪಡಿಸಿಕೊಳ್ಳೋಣವೆಂದು ಆಗಲೇ ಒಂದು ಮಸೂದೆ ತರಬಹುದಾಗಿತ್ತು. ಆದರೆ ಸರ್ಕಾರದವರ ಧೋರಣೆಯಲ್ಲಿ ಏನಾಗಿದೆ ಎಂದರೆ, ಅವರು ಮಾಡಿದ ತಪ್ಪುಗಳನ್ನು ಮಾಡಿ ಕೊನೆಗೆ ದುಡ್ಡು ಕೊಡುವ ಕಾಲದಲ್ಲಿ ಇಂತಹ ಒಂದು ತಿದ್ದುಪಡಿಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇಂತಹ ಪ್ರಸಂಗ ಇದು ಒಂದರಲ್ಲಿ ಮಾತ್ರ ನಡೆದಿದ್ದರೆ ನಾವುಗಳು ಯಾರು ಪ್ರಸ್ತಾಪ ಮಾಡುತ್ತಿರಲಿಲ್ಲ; ಅನೇಕ ಸಂದರ್ಭಗಳಲ್ಲಿ ಹಲವಾರು ರಿಟ್ ಪೆಟಿಷನ್‌ಗಳು ಹೈಕೋರ್ಟಿನಲ್ಲಿ ಹೋಗಿ ತೀರ್ಮಾನವಾಗಿ, ಸಂಬಂಧಪಟ್ಟ ಅಧಿಕಾರಿಗಳು ತಮಗೆ ಬರಬೇಕಾದಂಥ ಬಾಕಿಯನ್ನು ವಸೂಲು ಮಾಡುವುದಕ್ಕೆ ಅರ್ಜಿ ಹಾಕಿದ ಮೇಲೆ ಸರಕಾರದವರು ಎಚ್ಚರವಾಗುತ್ತಾರೆ; ಅಲ್ಲಿಯವರೆಗೂ ಸರಕಾರದವರು ನಿದ್ದೆ ಬಿಟ್ಟು ಎದ್ದಿರುವುದೇ ಇಲ್ಲ. ಈ ರೀತಿ ಆಗಿರುವುದು ಒಂದೇ ಸಂದರ್ಭ

ದಲ್ಲಲ್ಲ ; ಇಂತಹವು ಅನೇಕ ಸಂದರ್ಭಗಳು ಇವೆ. ಕಳೆದ ವರ್ಷ ಇಂಥಾದ್ದೇ ವಿಷಯವೊಂದು ಬಂದಿತ್ತು. ಹಲವಾರು ರಿಟ್ ಅರ್ಜಿಗಳು ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡದೇ ಇದ್ದು ದರಿಂದ ನೂರಾರು ರಿಟ್‌ಗಳು ತೀರ್ಮಾನವಾಗಿ ಅವರಿಗೆ ಕೊಡಬೇಕಾದ ಕೋಟ್ಯಾಂತರ ರೂಪಾಯಿ ಗಳ ಬಾಕಿ ಇಟ್ಟುಕೊಂಡಿರುವುದನ್ನು ನಾವು ನೋಡುತ್ತಾ ಇದ್ದೇವೆ. ಹೀಗೆ ಕೊಡಬೇಕಾದ ಬಾಕಿಯನ್ನು ತಪ್ಪಿಸುವ ಉದ್ದೇಶದಿಂದ ಹೋದ ವರ್ಷ ತಿದ್ದುಪಡಿ ತಂದಿರತಕ್ಕ ನಿರ್ದಶನ ಇದೆ. ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲಿಕ್ಕೆ ಮಾಡುತ್ತಿರುವ ನಾಟಕ ಇದು ಎಂದು ನಾನು ಹೇಳುತ್ತೇನೆ. ಸರಕಾರ ತಿದ್ದುಪಡಿಗಳನ್ನು ಮಾಡುವಾಗ ಸ್ವಲ್ಪ ಎಚ್ಚರಿಕೆ ಇರಬೇಕಾಗುತ್ತದೆ ; ಇಲ್ಲದೇ ಇದ್ದರೆ ಯಥಾಪ್ರಕಾರ ನಡೆಯುತ್ತಾ ಇರುತ್ತದೆ. ಆದುದರಿಂದ ಒಂದು ಉದಾಹರಣೆಯನ್ನು ಇಲ್ಲಿ ಹೇಳುತ್ತೇನೆ. ಸಂಬಂಧಪಟ್ಟ ಇಲಾಖೆಯವರು ಏನಾದರೂ ಒಂದು ಅಭಿಪ್ರಾಯವನ್ನು ನಮ್ಮ ಸಾಮಾನ್ಯ ಆಡಳಿತ ಇಲಾಖೆಗೆ ಸೂಚನೆ ಕೊಟ್ಟರೆ, ಇವರು ಇಲ್ಲಿ ಹೇಗೆ ಕುಂಭಕೋಣ ಮಾಡುತ್ತಾರ ಎನ್ನುವುದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ಸ್ ಅವರ ಆಫೀಸಿನಿಂದ ಒಂದು ಸೀನಿಯರ್ ಸ್ಟೆನೋಗ್ರಾಫರ್ ಪೋಸ್ಟಿಗೆ ರಿಕ್ರೂಟ್‌ಮೆಂಟ್ ಮಾಡಬೇಕೆಂದು ಕಾಮರ್ಸ್ ಇನ್‌ಸ್ಪೆಕ್ಟರ್‌ರವರಿಂದ ಒಂದು ತಿದ್ದುಪಡಿಯನ್ನು 19-4-1973 ರಲ್ಲಿ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿರತಕ್ಕ ಒಬ್ಬರು ಬಿ.ಎ., ಬಿಕಾಂ., ಓದಿ ಎಲ್ಲಾ ಅರ್ಹತೆಯನೂ ಪಡೆದು ಸುಮಾರು 18 ವರ್ಷ ಗಳಿಂದ ಸೇವೆ ಸಲ್ಲಿಸಿದ್ದಾರೆ. ಅವರಿಗೆ ಇದನ್ನು ಕೊಡಬೇಕೆಂದು ಮಾಡಿದ್ದರು. ಆದರೆ, ಸಾಮಾನ್ಯ ಆಡಳಿತ ಇಲಾಖೆಯವರ ದೃಷ್ಟಿಯಲ್ಲಿ ಯಾರೋ ಬೇರೆ ಇದ್ದರು. ಅವರಿಗೆ ಇದನ್ನು ಒದಗಿಸಿಕೊಡಬೇಕು ಎನ್ನುವ ಉದ್ದೇಶದಿಂದ ಇದಕ್ಕೆ ತದ್ವಿರುದ್ಧವಾಗಿ ಒಂದು ತಿದ್ದುಪಡಿಯನ್ನು 29-10-1974ರಲ್ಲಿ ಹೊರಡಿಸಿದ್ದರು. ನಾವು ಯಾವ ಉದ್ದೇಶದಿಂದ ತಿದ್ದುಪಡಿಯನ್ನು ಮಾಡಿ ದ್ದೇವೆ, ಅದರ ವ್ಯತಿರಿಕ್ತವಾಗಿ ನೀವು ಈ ಒಂದು ತಿದ್ದುಪಡಿಯನ್ನು ಕಳುಹಿಸಿದ್ದೀರಿ, ಇದು ಸಾಧು ವಾದುದಲ್ಲ ; ಮತ್ತು ನಮ್ಮ ಉದ್ದೇಶಕ್ಕೆ ವಿರುದ್ಧವಾಗಿ ನಡೆದುಕೊಳ್ಳಲಾಗಿದೆ ಎಂದು ಡಿ. ಡಿ. ಪಿ. ಐ. ಅವರು 14-12-1974 ರಲ್ಲಿ ಸರಕಾರಕ್ಕೆ ಉತ್ತರ ಕೊಟ್ಟಿದ್ದಾರೆ. ಹೀಗೆ ಸಾಮಾನ್ಯ ಆಡಳಿತ ಇಲಾಖೆಯಲ್ಲಿ ಏನು ನಡೆಯುತ್ತಾ ಇದೆ, ಇಂಥಾ ಕುಂಭಕೋಣ ಇದು ಸರ್ವೇಸಾಧಾರಣ ವಾದುದು. ಸಂಬಳ ಸಾರಿಗೆಗಳನ್ನು ಬದಲಾವಣೆ ಮಾಡತಕ್ಕ ಕಾಲದಲ್ಲಿ ಅವರವರೇ ಯಾರಿಗೆ ಸಹಾಯ ಮಾಡಬೇಕು ಎಂದು ಉದ್ದೇಶ ಇಟ್ಟುಕೊಂಡು ಮಾಡತಕ್ಕ ಘಟನೆಗಳು ನಡೆದು, ಅದ ಕ್ಕಾಗಿ ಪದೇ ಪದೇ ತಿದ್ದುಪಡಿ ತರುತ್ತಿದ್ದಾರೆ. ಇವತ್ತು, ದಯವಿಟ್ಟು ಇಂಥಾದಕ್ಕೆಲ್ಲಾ ಅವಕಾಶ ಮಾಡಿಕೊಡಬೇಡಿ ಎಂದು ಹೇಳುತ್ತೇನೆ. ಮಾನ್ಯ ಹಣಕಾಸಿನ ಸಚಿವರಿಗೆ ಸಂಬಂಧಪಟ್ಟ ಕಾಗದ ಗಳನ್ನು ಕೊಡುತ್ತೇನೆ. ಅವರು ಇವುಗಳನ್ನು ನೋಡಿಟ್ಟು ಯಾವ ರೀತಿ ಇದು ನಡೆಯಿತು ಎಂಬು ದನ್ನು ಹೇಳಬೇಕೆಂದು ಕೇಳುತ್ತೇನೆ. ಆದುದರಿಂದ, ಇಂಥಾ ಕುಂಭಕೋಣ ಘಟನೆಗಳನ್ನು ಗಮನ ದಲ್ಲಿಟ್ಟುಕೊಂಡು, ಅವು ಆಗದೇ ಇರತಕ್ಕ ರೀತಿಯಲ್ಲಿ ಮಾಡಿದರೆ ಈ ರೀತಿ ಆಗುವ ಘಟನೆಗಳನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಒಂದು ಸಲ ಹೈಕೋರ್ಟಿನಲ್ಲಿ ತೀರ್ಮಾನ ಆದಮೇಲೆ ಅದನ್ನು ಮಾನ್ಯ ಮಾಡತಕ್ಕದ್ದು ನಮ್ಮ ಜವಾಬ್ದಾರಿ ಇದೆ. ಹೈಕೋರ್ಟ್ ತೀರ್ಮಾನ ಮಾಡಿದ ಮೇಲೆ, ಅದರಿಂದ ತಪ್ಪಿಸಿಕೊಳ್ಳಲಿಕ್ಕೆ ತಿದ್ದುಪಡಿಗಳನ್ನು ತರುವುದು ಸಾಧುವಾದುದಲ್ಲ. ತೀರ್ಮಾನದ ಪ್ರಕಾರ ನಡೆದುಕೊಳ್ಳಲೇಬೇಕಾಗುತ್ತದೆ. ಈಗ ಮಾಡಿರುವ ಈ ಸಣ್ಣ ತಪ್ಪಿನಿಂದ ಹೈಕೋರ್ಟ್ ತೀರ್ಮಾನದ ವಿರುದ್ಧವಾಗಿ ಹೋಗುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ, ಆದುದರಿಂದ ಇದನ್ನು ತಪ್ಪಿಸಬೇಕು. ಹೈಕೋರ್ಟ್ ಒಂದು ತೀರ್ಮಾನ ಕೊಟ್ಟಮೇಲೆ ಅದರ ವಿರುದ್ಧ ಹೋಗುವ ಪ್ರವೃತ್ತಿ ಇನ್ನು ಮುಂದೆ ತಪ್ಪಬೇಕಾಗುತ್ತದೆ. ಇಂಥಾ ಘಟನೆಗಳು ಇನ್ನು ಮುಂದೆ ಬರದಂಥ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ ಎಂದು ಹೇಳುತ್ತೇನೆ. ಮಾನ್ಯ ಶಾಮಣ್ಣನವರು ಹೇಳಿದ ಹಾಗೆ, ಇದು ಇನ್ನೂ ಹಲವಾರು ಇಲಾಖೆಗಳಲ್ಲಿ ಇದೆ. ಇದೇ ತರಹ ಏನಾದರೂ ಆದರೆ, ಅದರ ಬಗ್ಗೆ ಒಂದು ತಿದ್ದುಪಡಿ ತರುವುದು ಇದೆ. ಬೇರೆ ಇಲಾಖೆಯಲ್ಲಿ ಯಾರು ರಿಟ್ ಹಾಕಿಲ್ಲ ; ಅಥವಾ ಅದನ್ನು ನೋಡಿ ಯಾರು ಪ್ರಸ್ತಾಪ ಮಾಡಲಿಕ್ಕೆ ಹೋಗಿಲ್ಲ ; ಏನೂ ನಡೆದಿಲ್ಲ ; ಎಲ್ಲಾ ಸರಿಯಾ ಗಿದೆ ಎಂದು ತಿಳಿದುಕೊಂಡಿದ್ದಾರೆ. 1970 ನೇ ಸಾಲಿನಿಂದ ಸರಕಾರದ ಆಜ್ಞೆಯಿಂದ ಏನು ಒಂದು ಘಟನೆ ನಡೆದಿದೆ, ಇವನ್ನು ಪುನರ್ ಪರಿಶೀಲನೆ ಮಾಡಿ ಎಲ್ಲೆಲ್ಲಿ ತಿದ್ದುಪಡಿ ಮಾಡುವುದಕ್ಕೆ ಸಾಧ್ಯ ಇದೆ, ಅದನ್ನು ಮಾಡಿ ಒಂದು ಮಸೂದೆಯನ್ನು ತರಬೇಕೆಂದೂ, ಇದರಲ್ಲಿ ಪೀಸ್ ಮೀಲ್ ಲೆಜಿಸ್ಲೇಷನ್ ಮಾಡುವುದಕ್ಕೆ ಹೋಗಬಾರದೆಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಗಮನಕ್ಕೆ ಬಂದಾಗ ಮಾಡಬೇಕಾಗುತ್ತದೆ ; ಗಮನಕ್ಕೆ ಬಾರದೇ ಇದ್ದರೆ ಹೇಗೆ ಮಾಡುವುದು ?

ಶ್ರೀ ಕಾಗೋಡು ತಿಮ್ಮಪ್ಪ.— ಇದರ ಹಿನ್ನೆಲೆಯಲ್ಲಿ ಎಷ್ಟು ಇಲಾಖೆಗಳಲ್ಲಿ ಹೀಗೆ ನಡೆದಿದೆ ಎಂಬುದನ್ನು ನೋಡಲು 8 ಜನರನ್ನು ಕೂಡಿಸಿ, ಇದನ್ನೆಲ್ಲಾ ವಿಮರ್ಶೆ ಮಾಡತಕ್ಕ ಕೆಲಸ ಮಾಡಬೇಕು. ಸಮಗ್ರವಾಗಿ ವಿಮರ್ಶೆ ಮಾಡಿ ರಿವಿಜನ್ ಆಫ್ ಪೇ ಸ್ಕೇಲ್ಸ್ ಮಾಡಿದರೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಇದರ ಸಾಧಕ ಬಾಧಕಗಳೇನು ಎಂಬುದನ್ನು ನೋಡಲು ಸಾಧ್ಯವಾಗುತ್ತದೆ. ಆದುದರಿಂದ, ಇದನ್ನು ದಯುವಿಟ್ಟು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತು ಇನ್ನು ಮುಂದೆ ಪೀಸ್‌ಮೀಲ್ ಲೆಜಿಸ್ಲೇಷನ್ ಮಾಡಬಾರದೆಂದು ಹೇಳಿ, ಜೊತೆಗೆ ಇದರ ಹಿನ್ನೆಲೆಯನ್ನು ಅರ್ಥಮಾಡಿಕೊಂಡರೆ, ಮುಂದೆ ಇದರಲ್ಲಿ ಅನುಕೂಲವಾಗುತ್ತದೆ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಈ ಚಿಕ್ಕ ಬಿಲ್ಲಿನ ಮೇಲೆ ಇಷ್ಟೊಂದು ಚರ್ಚೆಯಾಗುತ್ತದೆ ಎಂದು ನಾನು ತಿಳಿದುಕೊಂಡಿರಲಿಲ್ಲ. ಚರ್ಚೆಯಾಗಿದ್ದು ಬಹಳ ಒಳ್ಳೆಯದೇ ಎಂದು ನನ್ನ ಅಭಿಪ್ರಾಯ. ಮುಖ್ಯವಾದ ಕಾರಣ ಏನು ಎಂದರೆ, ಚರ್ಚೆಯಲ್ಲಿ ಭಾಗವಹಿಸಿರತಕ್ಕ ಎಲ್ಲಾ ಸದಸ್ಯರು ಡಿಪ್ಲೋಮಾ ಮತ್ತು ನಾನ್-ಡಿಪ್ಲೋಮ ಹೋಲ್ಡರ್ಸ್ ಮಧ್ಯದಲ್ಲಿ ಇರತಕ್ಕ ವ್ಯತ್ಯಾಸ, ನ್ಯಾಯಬದ್ಧವಾದುದು ಮತ್ತು ಸರಿಯಾದುದು ಎಂದು ವ್ಯಕ್ತ ಮಾಡಿದ್ದಾರೆ. ಮಾನ್ಯ ಕೃಷ್ಣನ್ ಅವರೂ ಕೂಡ ಇದರ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಒಂದು ಒಳ್ಳೆಯ ಉದ್ದೇಶವನ್ನು ತಪ್ಪಿಸುವ ದೃಷ್ಟಿಯಿಂದ ಮಾಡತಕ್ಕದ್ದು ಸರಿಯಲ್ಲ ಎಂದು ಸ್ಪಷ್ಟವಾಗಿದೆ. ಈ ಡಿಪ್ಲೋಮಾ ಮತ್ತು ನಾನ್-ಡಿಪ್ಲೋಮಾ ಮಧ್ಯದಲ್ಲಿ ಏನು ವ್ಯತ್ಯಾಸ ಇದೆ, ಅದನ್ನು ಅದೇ ರೀತಿ ಮುಂದುವರಿಸಬೇಕು ಎನ್ನುವುದು ಎಲ್ಲರ ಅಭಿಪ್ರಾಯ. ಹೀಗಿರುವಾಗ 1970 ರಲ್ಲಿ ರೀವೈಜ್ಡ್ ರೂಲ್ಸ್ ಮಾಡಿದಾಗ ತಪ್ಪು ಮಾಡಬಾರದಿತ್ತು. ಅದನ್ನು ಏತಕ್ಕೆ ಮಾಡಿದರು ಎಂದು ಉತ್ತರ ಹೇಳಲಿಕ್ಕೆ ಆಗುವುದಿಲ್ಲ, ನಾನು ಇದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಲಿಲ್ಲ. 1970 ರಲ್ಲಿ ರೂಲ್ಸ್ ಮಾಡುವಾಗ ತಪ್ಪು ಮಾಡಿದ್ದಾರೆಂದು ಸ್ಪಷ್ಟವಾಗಿ ಮೊದಲೇ ಹೇಳಿದ್ದೇನೆ. ತಪ್ಪು ಮಾಡಿದ್ದಾರೆಂದು ನಿಮ್ಮ ಭಾಷಣದಿಂದಲೂ ಸ್ಪಷ್ಟವಾಗುತ್ತದೆ. ಕೃಷ್ಣನ್ ಅವರು ಪ್ರಶ್ನೆ ಮಾಡಿದರು ಹೈಕೋರ್ಟ್ ಮುಂದೆ ಹೋದಾಗ ಇದನ್ನು ಒಪ್ಪಿಕೊಂಡರು ಎಂದು. ನಾನು ಈ ಬಗ್ಗೆ ವಿಚಾರಿಸಿದಾಗ, ಮಿಸ್ಟೇಕ್ ಎಂದು ನಾವು ಒಪ್ಪಿದ್ದೇವೆ ಎಂದು ಹೇಳಿದರು. ತಪ್ಪು ಆಗಿದೆ ಎಂದು ಸ್ಪಷ್ಟವಾಗಿ ಹೈಕೋರ್ಟಿನವರಿಗೆ ಹೇಳಿದರೂ ಅದನ್ನು ಅವರು ಗಮನಿಸುವುದಿಲ್ಲ. ಅವರು ಕಾನೂನು ಪ್ರಕಾರ ಹೇಳಿದರು : ಎಕ್ಸಿಕ್ಯುಟೀವ್ ಆರ್ಡರ್ ತಪ್ಪು ಮಾಡಿದರೆ, ಅದನ್ನು ಆರ್ಟಿಕಲ್ 309 ರ ಪ್ರಕಾರ ತಿದ್ದಲಿಕ್ಕೆ ಸಾಧ್ಯವಿಲ್ಲ' ಎಂದು ಇದು ಗೊತ್ತಾದ ನಂತರವೂ ಒಂದು ವರ್ಷ ಏತಕ್ಕೆ ಬೇಕು ಎಂದು ಪ್ರಶ್ನೆ ಮಾಡಿದ್ದಾರೆ. ಸರಕಾರ ಈ ಬಗ್ಗೆ ಸ್ವಲ್ಪ ನಿಧಾನವಾಗಿ ಕೆಲಸ ಮಾಡಿದೆ, ಲಾ ಡಿಪಾರ್ಟ್‌ಮೆಂಟಿನಿಂದ ಒಪೀನಿಯನ್ ತರಿಸಿಕೊಳ್ಳಬೇಕಾಗುತ್ತದೆ. ಇದು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ನಡೆದಿರತಕ್ಕದ್ದು. ಬೇರೆ ಇಲಾಖೆಗಳಲ್ಲೂ ಕೂಡ ನಡೆದಿರಬಹುದು. ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಕಳುಹಿಸಿ, ಇದನ್ನು ಯಾವ ರೀತಿಯಿಂದ ತಿದ್ದಬೇಕು ಎಂದು ಇದರ ಬಗ್ಗೆ ಯೋಚನೆ ಮಾಡಬೇಕಾಯಿತು : ರಿಟ್ರಾಸ್ಪೆಕ್ಟೀವ್ ಇಫೆಕ್ಟ್ ಕೊಡಬೇಕಾಯಿತು. ಇದರಲ್ಲಿ ಒಂದು ಸಮಾಧಾನ ಏನೆಂದರೆ ಇದರಿಂದ ಯಾರಿಗೂ ಅಪಾಯವಾಗಿಲ್ಲ. ನಮ್ಮ ದೇಶದಲ್ಲಿ ಸರ್ಕಾರ ನಿಧಾನವಾಗಿ ನಡೆಯುತ್ತಾ ಇದೆ. ಒಂದು ಸತ್ಯ ಹೇಳಿದರೆ ನಮ್ಮ ಸಿಸ್ಟಂ ಬಹಳ ಸ್ಲೋ ಇದೆ. ಭಾಷಣದಿಂದ ಇದನ್ನು ಬದಲಾಯಿಸುವುದಕ್ಕಾಗುವುದಿಲ್ಲ ಎಂಬ ಒಂದು ಮಾತನ್ನು ಸ್ಪಷ್ಟವಾಗಿ ಒಪ್ಪುತ್ತೇನೆ. ಆ ಕಾಲಕ್ಕೆ ಮಾಡಿರುವುದು ತಪ್ಪು. ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ ಇಂತಹ ಪ್ರಸಂಗಗಳು ಇನ್ನು ಮುಂದಾದರೂ ಕಡಿಮೆ ಮಾಡಿಕೊಳ್ಳುವ ಸರ್ವಪ್ರಯತ್ನ ಮಾಡಬೇಕು ಎಂದು ಇಷ್ಟು ಮಾತ್ರ ಹೇಳಬಹುದು. ಇನ್ನು ಒಂದು ಪ್ರಶ್ನೆ ತುಕೋಳ್ ಕಮಿಷನ್‌ನಲ್ಲಿ ಈ ಡಿಸ್ಟಿಂಕ್ಷನ್ ಬಗ್ಗೆ ಪ್ರಸ್ತಾಪ ಆಯಿತು ತುಕೋಳ್ ಕಮಿಷನ್ನಲ್ಲಿ ಡಿಪ್ಲೊಮೊ ಹೋಲ್ಡರ್ಸ್ ಮತ್ತು ನಾನ್ ಡಿಪ್ಲೊಮೊ ಹೋಲ್ಡರ್ಸ್‌ಗೆ ಡಿಸ್ಟಿಂಕ್ಷನ್ ಮಾಡಿದ್ದಾರೆ. ತುಕೋಳ್ ಕಮಿಷನ್‌ನಿಂದ ಬಂದಿರತಕ್ಕ ವಿಷಯ, ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯ, ಸರ್ಕಾರದ ವತಿಯಿಂದ ಹೇಳಿರತಕ್ಕ ವಿಷಯ ಎಲ್ಲಾ ನೋಡಿದರೆ ಇದು ತಪ್ಪು ಎಂದು ಸ್ಪಷ್ಟವಾಗಿ ಕಾಣುತ್ತದೆ. ಈಗ ನಮಗೆ ಬಂದಿರತಕ್ಕ ಕಷ್ಟ ಏನು ಎಂದರೆ, ಕಾನೂನು ಪ್ರಕಾರ ತಿದ್ದಬೇಕಾದರೆ ಇಷ್ಟು ಎಲ್ಲಾ ಮಾಡಬೇಕಾಯಿತು. ನಮ್ಮ ದೇಶದಲ್ಲಿ ಇರತಕ್ಕ ಕಾನೂನು ಏನು ಇದೆ ಅದರ ಪ್ರಕಾರ ಮಾಡಬೇಕು. 309 ರ ಪ್ರಕಾರ ತಿದ್ದಬೇಕಾಗಿತ್ತು, 309ರ ಪ್ರಕಾರ ತಿದ್ದುಪಡಿ ಮಾಡಿದರೂ ಕೂಡ ಹೈಕೋರ್ಟ್ ಡಿಸಿಷನ್ ಓವರ್‌ರೈಡ್ ಮಾಡುವುದಕ್ಕೆ ಆಗುತ್ತಿರಲಿಲ್ಲ. ಲಾ ಡಿಪಾರ್ಟ್‌ಮೆಂಟ್ ಒಪಿನಿಯನ್ ಆ ರೀತಿ ಇರುವುದರಿಂದ ಆರ್ಡಿನೆನ್ಸ್ ಮಾಡಿ ಮತ್ತೆ ಅದನ್ನು ತಿದ್ದುಪಡಿ ಮಸೂದೆ ಮುಖಾಂತರ ಈ ಸಭೆಯ ಮುಂದೆ ತರಬೇಕಾಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಕಂಟೆಂಪ್ಟ್ ಆಫ್ ಪ್ರೊಸೀಡಿಂಗ್ಸ್ ಹಾಕಿದ ಮೇಲೆ ಆರ್ಡಿನೆನ್ಸ್ ಹೊರಡಿಸಿದ್ದೀರಿ.

ಶ್ರೀ ಟಿ. ಆರ್. ಶಾಮಣ್ಣ.—ಸೆಕ್ರೆಟರಿಯೇಟ್‌ನಲ್ಲಿ ಯಾವರೀತಿ ಮಿಸ್‌ಚೀಫ್, ಮಾಡುತ್ತಾರೆ, ಕುಂಭಕೋಣ ಮಾಡಿದ್ದಾರೆ ಎಂದು ಹೇಳಿದರು, ಕ್ವಾಲಿಫೈಡ್ ಆಗಿ 18 ವರ್ಷ ಸರ್ವೀಸ್ ಮಾಡಿ, ಅಸ್ಟ್ ಆಫೀಸರ್ ಕೆಲಸದಲ್ಲಿ ಇರುವವರು ಅಪ್ಲಿಕೇಷನ್ ಇಲ್ಲದಂತೆ ಮಾಡಿದ್ದಾರೆ, ಇದು ಹೇಗೆ ?

ಶ್ರೀ ಎಂ. ವೈ. ಘೋರ್ಪಡೆ.—ಅದು ಬೇರೆ ವಿಷಯ. ಈ ಸಭೆಯಲ್ಲಿ ಅದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಈ ಬಿಲ್ಲನ್ನು ತಾವು ಎಲ್ಲರೂ ಒಮ್ಮತದಿಂದ ಒಪ್ಪುತ್ತೀರೆಂದು ನಾನು ನಂಬಿದ್ದೇನೆ.

ಶ್ರೀ ಸಿ. ಬೈರೇಗೌಡ.—ಮುಂಬಡ್ತಿ ಕೊಡುವಾಗ, ಸಂಬಳಸಾರಿಗೆ ನಿಗದಿಮಾಡುವಾಗ ವಸೂಲಿ ನಡೆಯುತ್ತಿದೆ ಎಂದು ಅನೇಕ ಸರ್ಕಾರಿ ನೌಕರರು ಹೇಳಿದ್ದಾರೆ. ಆ ಬಗ್ಗೆ ಅನುಮಾನ ಇದೆ, ಮಾನ್ಯಮಂತ್ರಿಗಳು ಅದನ್ನು ಪರಿಹಾರ ಮಾಡಲಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ನಾನು ಆಗಲೇ ಹೇಳಿದೆ, ತುಕೋಳ್ ಕಮಿಷನ್‌ನಲ್ಲಿ ಡಿಸ್ಟಿಂಕ್ಷನ್ ಇದೆ ಎಂದು, ಮಾನ್ಯ ಸದಸ್ಯರು ಎಲ್ಲರೂ ಡಿಸ್ಟಿಂಕ್ಷನ್ ಇರಬೇಕಾದುದು ಸರಿ ಎಂದು ಅಭಿಪ್ರಾಯ ಪಟ್ಟಿದ್ದಾರೆ, ಹೈಕೋರ್ಟಿನಲ್ಲಿ ಹೋದಾಗ ಕೂಡ ಸರ್ಕಾರದ ವತಿಯಿಂದ ಡಿಸ್ಟಿಂಕ್ಷನ್ ಇರಬೇಕು, ಮಿಸ್ಟೇಕ್ ಆಗಿದೆ ಎಂದು ಹೇಳಿದ್ದೆವು. ಆದರೂ ಕೂಡ ಒಂದು ಲೀಗಲ್ ಪಾಯಿಂಟ್ ಮೇಲೆ ತಿದ್ದಲಿಕ್ಕೆ ಆಗುವುದಿಲ್ಲ ಎಂದು ಹೈಕೋರ್ಟಿನಲ್ಲಿ ಹೇಳಿದ್ದಾರೆ. ಕಾನೂನು ಪ್ರಕಾರ ಯಾವ ರೀತಿ ಸರಿಪಡಿಸಬೇಕೋ ಆರೀತಿ ಸರಿಪಡಿಸಬೇಕಾಗಿದೆ ಇದರಲ್ಲಿ ಯಾವ ಒಂದು ಮೋಸನಡೆದಿಲ್ಲ.

Mr. DEPUTY SPEAKER.—The question is :

"That the Karnataka Civil Services (Revision of Pay of Certain Categories of Posts) Bill, 1975, be taken into consideration."

The motion was adopted

CLAUSES 2 TO 4

Mr. DEPUTY SPEAKER.—I will put the clauses. The question is: That clauses 2 to 4, both inclusive do stand part of the Bill.

The motion was adopted

(Clauses 2, to 4 both inclusive were added to the Bill)

CLAUSE 1 ETC.,

Mr. DEPUTY SPEAKER.—The question is :

That clause 1, the long title the preamble and the Enacting formula do stand part of the Bill.

The motion was adopted

(Clause 1, the long title, the preamble and the Enacting formula, were added to the Bill).

Motion to Pass

Sri M. Y. GHORPADE.—I move:

"That the Karnataka Civil Services (Revision of Pay of certain Categories of Posts) Bill, 1975, be passed."

Mr. DEPUTY SPEAKER.—The question is :

"That the Karnataka Civil Services (Revision of Pay of certain Categories of Posts) Bill, 1975, be passed."

The motion was adopted and the Bill was passed

Mr. DEPUTY SPEAKER.—Now the House will adjourn and meet tomorrow at 1 P. M.

The House adjourned at Fifty Six Minutes past Five of the Clock to meet again at One of the Clock on *Thursday, the 20th February, 1975.*